ಕನ್ನಡಪ್ರಭ
ಗುರುವಾರ 7.05.2026

ಹೆಚ್ಚಿನ ಸುದ್ದಿ ಪುಟ 9ರಲ್ಲಿ

ಗರಿಷ್ಠ 33°c | ಕನಿಷ್ಠ 23°c

ಸುದ್ದಿ ಸಿಂಚನ

ಕರಿಯಪಲ್ಲಿ ಚೌಡೇಶ್ವರಿಗೆ ತಂಬಿಟ್ಟಿನ ದೀಪೋತ್ಸವ

ಚಿಂತಾಮಣಿ: 13 ವರ್ಷಗಳಿಂದ ನಿರಂತರವಾಗಿ ಶ್ರೀ ಚೌಡೇಶ್ವರಿ ದೇವಿಗೆ ತಂಬಿಟ್ಟಿನ ದೀಪಗಳನ್ನು ಮಾಡಿ ಪೂಜಿಸುವುದು ಸಂಪ್ರದಾಯ ವಾಗಿದೆ ಎಂದು ಗ್ರಾಮದ ಹಿರಿಯ ಮುಖಂಡ ವೆಂಕಟ ಸುಬ್ಬಾರೆಡ್ಡಿ ನುಡಿದರು. ಅಮ್ಮನವರಿಗೆ ಪೂಜಾ ಕೈಂಕರ್ಯಗಳನ್ನು ಮಾಡಿಸುವ ಪರಂಪರೆಯ ಹಿನ್ನೆಲೆಯಲ್ಲಿ ದೇವಿಗೆ ವಿಶೇಷ ಪೂಜೆ ಮತ್ತು ತಂಬಿಟ್ಟಿನ ದೀಪಗಳನ್ನು ಮಾಡಿ ದೇವರಿಗೆ ಸಮರ್ಪಿಸುವ ಪದ್ಧತಿಯಿದೆ ಎಂದರು. ನಗರದ ಹೊರವಲಯದದಲ್ಲಿರುವ ಕರಿಯಪಲ್ಲಿ ಗ್ರಾಮದಲ್ಲಿ ನೆಲೆಸಿರುವ ಶ್ರೀಚೌಡೇಶ್ವರಿ ಅಮ್ಮನವರಿಗೆ ಅಲಂಕಾರ ಮತ್ತು ವಿಶೇಷ ಪೂಜೆಯನ್ನು ಸಲ್ಲಿಸಿದ ನಂತರ ಮಾತನಾಡಿ ಶ್ರೀ ಚೌಡೇಶ್ವರಿ ದೇವಿ ನಮ್ಮ ಇಷ್ಟಾರ್ಥಗಳನ್ನು ಈಡೇರಿಸುತ್ತಿದ್ದು ದೇವಿಯ ಕೃಪೆಯಿಂದ ಸಮಸ್ತ ಗ್ರಾಮದ ಜನತೆಗೆ ಒಳಿತಾಗುತ್ತಿದ್ದು ದೇವಿಯ ಕೃಪೆಯಿಂದ ಉತ್ತಮ ಮಳೆ-ಬೆಳೆಯಾಗಿ ಸಮಸ್ತ ಜನತೆ ಹಾಗೂ ಜಾನುವಾರು ಸಮೃದ್ಧಿಯಿಂದ ಬಾಳಲೆಂದು ದೇವಿಯಲ್ಲಿ ಪ್ರಾರ್ಥಿಸಿರುವುದಾಗಿ ತಿಳಿಸಿದರು. ಪೂಜಾರಿ ಪಾರ್ವತಮ್ಮ ಮುನಿವೆಂಕಟಪ್ಪನವರು ದೇವಿಗೆ ವಿಶಿಷ್ಟ ಅಲಂಕಾರ ವ್ಯವಸ್ಥೆ ಮಾಡಿದ್ದರು. ಮಹಿಳೆಯರು ದೇವಿಗೆ ತಂಬಿಟ್ಟಿನ ದೀಪಗಳನ್ನು ಮಾಡಿ ಗ್ರಾಮದಿಂದ ದೇವಾಲಯದವರೆಗೆ ಸಾಗಿಬಂದು ದೇವರಲ್ಲಿ ತಮ್ಮ ಹರಕೆಗಳನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಮುನಿವೆಂಕಟಪ್ಪ, ಗೌರಮ್ಮ ಭಕ್ತಾದಿಗಳು, ಕರಿಯಪಲ್ಲಿ ಗ್ರಾಮಸ್ಥರು ಇದ್ದರು.

ಕೆಜಿಎಫ್ ತಾ. ಶಿಕ್ಷಕರ ಸಂಘಕ್ಕೆ ಅವಿರೋಧ ಆಯ್ಕೆ

ಕೆಜಿಎಫ್: ತಾಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರ ಚುನಾವಣೆಯಲ್ಲಿ ಎಲ್ಲ ಸ್ಥಾನಗಳಿಗೆ ಶಿಕ್ಷಕರು ಅವಿರೋಧವಾಗಿ ಆಯ್ಕೆಯಾಗಿದ್ದು, ಅಧ್ಯಕ್ಷರಾಗಿ ಎಂ. ನಾರಾಯಣಸ್ವಾಮಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ತ್ಯಾಗರಾಜ್, ಮಹಿಳಾ ಉಪಾಧ್ಯಕ್ಷರಾಗಿ ಭಾರತಿ, ಕಾರ್ಯದರ್ಶಿಯಾಗಿ ಪಿ.ವಿ. ಶ್ರೀನಿವಾಸ್, ಖಜಾಂಚಿಯಾಗಿ ಟಿ. ಶ್ರೀನಿವಾಸ್, ಸಹ ಕಾರ್ಯದರ್ಶಿಯಾಗಿ ಛಾಯಾದೇವಿ, ಜಿಲ್ಲೆಯ ಪ್ರತಿನಿಧಿಗಳಾಗಿ ನಾಗವೇಣಿ, ಜಿ. ಶ್ರೀನಿವಾಸ ಮೂರ್ತಿ ಆಯ್ಕೆಯಾಗಿದ್ದಾರೆ. ಸರ್ಕಾರಿ ನೌಕರ ಸಂಘದ ತಾಲೂಕು ಅಧ್ಯಕ್ಷ ಎಲ್. ನರಸಿಂಹಮೂರ್ತಿ ನೂತನ ತಂಡಕ್ಕೆ ಶುಭ ಕೋರಿದರು. ಈ ಸಂದರ್ಭದಲ್ಲಿ ನೂತನ ಪದಾಧಿಕಾರಿಗಳಾದ ಕೆ. ಶ್ರೀನಿವಾಸ್, ತ್ಯಾಗರಾಜ್, ಭಾರತಿ, ಛಾಯಾದೇವಿ, ನಾಗವೇಣಿ, ಜಿ. ಶ್ರೀನಿವಾಸ ಮರ್ತಿ, ನೌಕರರ ಸಂಘದ ಎಸ್.ಕೆ. ಕೃಷ್ಣಮೂರ್ತಿ, ರವಿ ಚಂದ್ರನ್ ನಾಯ್ಡು, ವಿವಿಧ ವೃಂದ ಸಂಘಗಳ ಅಧ್ಯಕ್ಷರಾದ ಮಾಲತೇಶ್, ಡಾ. ಬಾಬು, ಅಶ್ವಥ್, ಗಂಗಾಧರ್, ಸುಬ್ರಮಣಿ, ಅಂಬಿಕಾ, ಮಲ್ಲಿಗ, ಆನಂದ ಕುಮಾರ್, ಎಲ್ಐಸಿ ಶ್ರೀನಿವಾಸ್ ದವಣೇಶ್, ಕೆ.ವಿ. ಆನಂದ್, ಕೃಷ್ಣಪ್ಪ, ನಾರಾಯಣಸ್ವಾಮಿ ಉಪಸ್ಥಿತರಿದ್ದರು.

ಕೋಲಾರದಲ್ಲಿ ತ್ರಿಮತಸ್ಥ ಬ್ರಾಹ್ಮಣರಿಗೆ ಉಪನಯನ

ಕೋಲಾರ: ಬ್ರಾಹ್ಮಣ ಸಂಘದಿಂದ ಪ್ರತಿ ವರ್ಷದಂತೆ ಈ ವರ್ಷವೂ ನಗರದ ಗಾಯತ್ರಿ ಮಂದಿರದಲ್ಲಿ ಸಾಮೂಹಿಕ ಉಪನಯನ ತ್ರಿಮತಸ್ಥ ಬ್ರಾಹ್ಮಣರಿಗಾಗಿ ಏರ್ಪಡಿಸಿದೆ. ಉಪನಯನ ಸ್ವಸ್ತಿಶ್ರೀಪರಾಭವ ಜ್ಯೇಷ್ಠ ಶುಕ್ಲ ಸಪ್ತಮಿ, ಭಾನುವಾರ, 21 ಜೂನ್ 2026, ಅಭಿಜಿನ್ ಲಗ್ನದಲ್ಲಿ ನಡೆಯಲಿದೆ. ಉಪನಯನ ಮಾಡಿಸಲು ಇಚ್ಛಿಸುವ ಪೋಷಕರು ವಟುವಿನ ಹೆಸರು, ಪೋಷಕರ ಹೆಸರು, ಗೋತ್ರ, ಸಂಪ್ರದಾಯ, ವಿಳಾಸ ವಾಟ್ಸಪ್ ಮೂಲಕ 8892713071 ಸಂಖ್ಯೆಗೆ ಕಳುಹಿಸಲು ಕೋರಿದೆ. ಮಾಹಿತಿಗಾಗಿ ಶೃಂಗೇರಿ ಶಂಕರಮಠದ ಧರ್ಮಾಧಿಕಾರಿ ಜೆ.ಎನ್. ರಾಮಕೃಷ್ಣ 9731040800, ಜೆ.ಎಸ್.ಜಯತೀರ್ಥ 08152226124ರಂಗನಾಥ್9972796578 ಸಂಪರ್ಕಿಸಿ.

ಸಹಾಯ ಧನಕ್ಕೆ ಅರ್ಜಿ

ಕೋಲಾರ: 2026-27ನೇ ಸಾಲಿನ ಪಟ್ಟಣ ಪಂಚಾಯಿತಿ ನಿಧಿ ಮತ್ತು ಎಸ್.ಎಫ್.ಸಿ ಮುಕ್ತ ನಿಧಿಯಲ್ಲಿ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಈ ವ್ಯಾಪ್ತಿಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ವಿಶೇಷಚೇತನರಿಗೆ ಮತ್ತು ಇತರೆ ಹಿಂದುಳಿದ ವರ್ಗಗಳ ನಿವಾಸಿಗಳಾಗಿದ್ದು, ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಎಸ್.ಎಲ್.ಸಿ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಸಹಾಯ ಧನ ಹಾಗೂ ಅಂಗನವಾಡಿ ಕೇಂದ್ರಗಳಿಗೆ ಆರ್.ಓ. ವಾಟರ್‌ಫಿಲ್ಟರ್‌ಗಳು ಒದಗಿಸುವುದು. ಕೃತಕ ಅವಯವಗಳ ಸೌಲಭ್ಯ ಅರ್ಹ ಫಲಾನುವಿಗಳು ಸೂಕ್ತ ದಾಖಲೆಗಳನ್ನು ನಿಗದಿತ ಅರ್ಜಿ ನಮೂನೆಯೊಂದಿಗೆ ಮೇ 31ರಂದು ಸಂಜೆ 5ರೊಳಗೆ ಕಚೇರಿಗೆ ಸಲ್ಲಿಸಬಹುದು. ಮಾಹಿತಿಗಾಗಿ ವೇಮಗಲ್- ಕುರುಗಲ್ ಪಟ್ಟಣ ಪಂಚಾಯಿತಿಯ ಅಧಿಕಾರಿಗಳನ್ನು ಸಂಪರ್ಕಿಸಬಹುದು.



ಚಿಂತಾಮಣಿಯ ಹೊರವಲಯದಲ್ಲಿರುವ ಕರಿಯಪಲ್ಲಿ ಗ್ರಾಮದಲ್ಲಿ ನೆಲೆಸಿರುವ ಶ್ರೀಚೌಡೇಶ್ವರಿ ಅಮ್ಮನವರಿಗೆ ಅಲಂಕಾರ ಮತ್ತು ವಿಶೇಷ ಪೂಜೆಯನ್ನು ಭಕ್ತಾದಿಗಳು ಸಲ್ಲಿಸಿದರು. ಗ್ರಾಮದ ಮುಖಂಡ ವೆಂಕಟಸುಬ್ಬಾರೆಡ್ಡಿ, ಮುನಿವೆಂಕಟಪ್ಪ, ಪಾರ್ವತಮ್ಮ ಮತ್ತಿತರರು ಇದ್ದರು.



ಕೆಜಿಎಫ್ ತಾಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆಯಲ್ಲಿ ಎಲ್ಲ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾದ ಶಿಕ್ಷಕರು ಹಾಗೂ ಸಹ ಶಿಕ್ಷಕರ ತಂಡ. ಸಂಘಕ್ಕೆ ಅಧ್ಯಕ್ಷರಾಗಿ ಎಂ. ನಾರಾಯಣಸ್ವಾಮಿ ಅವರೂ ಅವಿರೋಧವಾಗಿ ಆಯ್ಕೆಗೊಂಡರು.



ಅಕ್ರಮ ಮರಳು ದಂಧೆ: 1 ಜೆಸಿಬಿ, 2 ಟ್ರ್ಯಾಕ್ಟರ್ ವಶಕ್ಕೆ

ಮುಳಬಾಗಿಲು: ತಾಲೂಕಿನ ಯಾವುದೇ ಸರ್ಕಾರಿ ಕೆರೆಗಳಲ್ಲಿ ಮಣ್ಣು ಮತ್ತು ಮರಳನ್ನು ಅಕ್ರಮವಾಗಿ ಸಾಗಾಣಿಕೆ ಮಾಡಿದರೆ ಕಾನೂನು ಕ್ರಮ ಕೈಗೊಳ್ಳುವುದಾಗಿ ತಹಸೀಲ್ದಾರ್ ವಿ. ಗೀತಾ ಎಚ್ಚರಿಸಿದ್ದಾರೆ. ತಾಲೂಕಿನ ಕಾಶೀಪುರ ಕೆರೆಯಲ್ಲಿ ಅಕ್ರಮವಾಗಿ ಮಣ್ಣು ಸಾಗಾಣಿಕೆ ಮಾಡುತ್ತಿರುವ ಖಚಿತ ಮಾಹಿತಿ ಮೇರೆಗೆ ಅಧಿಕಾರಿಗಳೊಂದಿಗೆ ದಿಢೀರ್ ದಾಳಿ ನಡೆಸಿ ಅಕ್ರಮವಾಗಿ ಮಣ್ಣು ಟ್ರ್ಯಾಕ್ಟರ್‌ಗಳಲ್ಲಿ ಮಾರಾಟ ಮಾಡಲು ಸಾಗಾಣಿಕೆ ಮಾಡುತ್ತಿದ್ದ ವಾಹನಗಳನ್ನು ತಡೆದು ಖಡಕ್ ಎಚ್ಚರಿಕೆ ನೀಡಿದ ಅವರು, ಒಂದು ಜೆಸಿಬಿ ಮತ್ತು 2 ಟ್ರ್ಯಾಕ್ಟರ್‌ಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ತಾಲೂಕಿನಾದ್ಯಂತ ಕೆರೆ ಗುಂಡು ತೋಪು ರಾಜಕಾಲುವೆಗಳ ಪರಿಶೀಲನೆ ಮಾಡುತ್ತೇನೆ, ಅಕ್ರಮವಾಗಿ ಒತ್ತುವರಿ ಮಾಡುವುದು ಮತ್ತು ಕೆರೆಗಳಲ್ಲಿ ಮಣ್ಣು ಮತ್ತು ಮರಳು ತೆಗೆಯುವುದು ಕಂಡು ಬಂದರೆ ಸೂಕ್ತ ಕ್ರಮ ಕೈಗೊಳ್ಳುತ್ತೇನೆ ಎಂದು ತಿಳಿಸಿದರು.

ಮುದ್ದೇನಹಳ್ಳಿಯ ಸತ್ಯಸಾಯಿ ವೈದ್ಯ ಕಾಲೇಜಿಗೆ ಎನ್‌ಎಬಿಎಚ್ ಮಾನ್ಯತೆ

ಉಚಿತ ವೈದ್ಯಕೀಯ ಸೇವೆ ನೀಡುವ ಕಾಲೇಜುಗಳಲ್ಲಿ ಒಂದೆಂಬ ಹೊಸ ಗರಿಮೆ

• **ಕನ್ನಡಪ್ರಭ ವಾರ್ತೆ** ಚಿಕ್ಕಬಳ್ಳಾಪುರ

ತಾಲೂಕಿನ ಮುದ್ದೇನಹಳ್ಳಿಯ ಸತ್ಯಸಾಯಿ ಗ್ರಾಮದ ಶ್ರೀ ಮಧುಸೂದನ ಸಾಯಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ರಾಷ್ಟ್ರೀಯ ಆಸ್ಪತ್ರೆಗಳು ಮತ್ತು ಆರೋಗ್ಯ ಸೇವಾ ಮಾನ್ಯತಾ ಮಂಡಳಿ (ಎನ್‌ಎಬಿಎಚ್) ಆರಂಭಿಕ ಹಂತದ ಮಾನ್ಯತೆ ನೀಡಿದೆ. ಇದರೊಂದಿಗೆ ಗ್ರಾಮೀಣ ಆರೋಗ್ಯ ಸೇವೆಗೆ ಹೊಸ ಬಲ ಸಿಕ್ಕಂತಾಗಿದೆ.

ಈ ಪ್ರತಿಷ್ಠಿತ ಮಾನ್ಯತೆಯಿಂದಾಗಿ ಸಂಸ್ಥೆಯು ರೋಗಿಯ ಸುರಕ್ಷತೆ, ಗುಣಮಟ್ಟದ ಚಿಕಿತ್ಸೆ ಹಾಗೂ ಆಸ್ಪತ್ರೆ ನಿರ್ವಹಣೆಯ ರಾಷ್ಟ್ರೀಯ ಮಾನದಂಡಗಳನ್ನು ಸಮರ್ಥವಾಗಿ ಪಾಲಿಸುತ್ತಿದೆ ಎಂಬುದು ದೃಢಪಟ್ಟಿದೆ. ಸಂಪೂರ್ಣ ಉಚಿತ ಸೇವೆಗಳನ್ನು ನೀಡುವ ದೇಶದ ವಿರಳ ಗ್ರಾಮೀಣ ವೈದ್ಯಕೀಯ ಕಾಲೇಜುಗಳಲ್ಲಿ ಒಂದಾದ ಈ ಸಂಸ್ಥೆಗೆ ಹೊಸ ಗರಿಮೆ ಲಭಿಸಿದಂತಾಗಿದೆ.

ನಿರಂತರ ಪರಿಶ್ರಮ: ಸದ್ಗುರು ಶ್ರೀ ಮಧುಸೂದನ ಸಾಯಿ ಅವರ ಮಾರ್ಗದರ್ಶನದಲ್ಲಿ 2025ರ ಜನವರಿಯಲ್ಲಿ ಆರಂಭವಾದ ಗುಣಮಟ್ಟ ಸುಧಾರಣಾ ಪ್ರಕ್ರಿಯೆ, ಒಂದು ವರ್ಷದ ನಿರಂತರ ಪರಿಶ್ರಮ, ಶಿಸ್ತು ಮತ್ತು ತಂಡದ ಪ್ರಯತ್ನದ ಫಲವಾಗಿ ಈ ಸಾಧನೆ ಸಾಧ್ಯವಾಗಿದೆ. ವೈದ್ಯರು, ಶುಶ್ರೂಷಕರು ಹಾಗೂ ಸಿಬ್ಬಂದಿ ವರ್ಗದ ಪ್ರಯತ್ನಗಳಿಂದ ಕ್ಲಿನಿಕಲ್ ಮತ್ತು ಆಡಳಿತಾತ್ಮಕ ವ್ಯವಸ್ಥೆಗಳು ರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾಗಿ ರೂಪುಗೊಂಡು ಜಾರಿಗೊಂಡಿವೆ. ಈ ಅವಧಿಯಲ್ಲಿ ಆಂತರಿಕ, ಬಾಹ್ಯ ಲೆಕ್ಕಪರಿಶೋಧನೆಗಳನ್ನು ಹಲವು ಹಂತಗಳಲ್ಲಿ ನಡೆಸಿ, ಕಾರ್ಯವಿಧಾನಗಳನ್ನು ಪರಿಶೀಲಿಸಿ ಸುಧಾರಣೆ ಕೈಗೊಳ್ಳಲಾಗಿದೆ. 2026ರ ಜ.12ರಂದು ನಡೆದ ಎನ್ಎಬಿಹೆಚ್ ಪರಿಶೀಲನೆಯಲ್ಲಿ ಸಂಸ್ಥೆ ಉತ್ತೀರ್ಣವಾಗಿದೆ.



ಸಾಯಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ.

ಸಂಪೂರ್ಣ ಮಾನ್ಯತೆ: ಡಾ. ಪದ್ಮಶ್ರೀ ವಿಶ್ವಾಸ

ದೇಶದಲ್ಲಿರುವ ಸುಮಾರು 80 ರಿಂದ 90 ಸಾವಿರ ಆಸ್ಪತ್ರೆಗಳ ಪೈಕಿ ಕೇವಲ ಶೇ. 1.4ರಷ್ಟು ಆಸ್ಪತ್ರೆಗಳು ಮಾತ್ರ ಸಂಪೂರ್ಣ ಮಾನ್ಯತೆ ಪಡೆದಿವೆ. ಸುಮಾರು ಶೇ.3 ಆಸ್ಪತ್ರೆಗಳು ಮಾತ್ರ ಆರಂಭಿಕ ಹಂತದ ಮಾನ್ಯತೆ ಹೊಂದಿವೆ. ಸಂಪೂರ್ಣ ಉಚಿತ ವೈದ್ಯಕೀಯ ಸೇವೆಗಳನ್ನು ನೀಡುವ ಆಸ್ಪತ್ರೆಗಳ ಸಂಖ್ಯೆ ತೀರಾ ಕಡಿಮೆ. ನಮ್ಮ ಸಂಸ್ಥೆಗೆ ಮಾನ್ಯತೆ ದೊರಕಿರುವುದು ಮೊದಲ ಹೆಜ್ಜೆಯಾಗಿದೆ. ಶೀಘ್ರದಲ್ಲೇ ಸಂಪೂರ್ಣ ಎನ್‌ಎಬಿಹೆಚ್ ಮಾನ್ಯತೆ ಪಡೆಯುವ ವಿಶ್ವಾಸವೂ ನಮಗಿದೆ ಎಂದು ಶ್ರೀ ಮಧುಸೂದನ ಸಾಯಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ. ಪದ್ಮಶ್ರೀ ಹೇಳಿದರು.

ಜುಲೈನಲ್ಲಿ ಕೆಜಿಎಫ್ ಅಲ್ಟ್ರಾ ಮ್ಯಾರಥಾನ್ ಕ್ರೀಡಾಕೂಟ

ಕೆಜಿಎಫ್ ಸಾಂಸ್ಕೃತಿಕ ಪರಂಪರೆ ಬಿಂಬಿಸುವ ಗುರಿ: ಡಿಸಿ

• **ಕನ್ನಡಪ್ರಭ ವಾರ್ತೆ** ಕೋಲಾರ



ಜಿಲ್ಲೆಯ ಐತಿಹಾಸಿಕ ಹಿನ್ನೆಲೆಯುಳ್ಳ ಕೆಜಿಎಫ್ ಪ್ರದೇಶದ ಪ್ರವಾಸೋದ್ಯಮ ಮತ್ತು ಸಾಂಸ್ಕೃತಿಕ ಪರಂಪರೆ ಜಾಗತಿಕ ಮಟ್ಟದಲ್ಲಿ ಬಿಂಬಿಸುವ ನಿಟ್ಟಿನಲ್ಲಿ ಕೆಜಿಎಫ್ ಅಲ್ಟ್ರಾ ಮ್ಯಾರಥಾನ್ -2026 ಕ್ರೀಡಾಕೂಟ ಜುಲೈ ತಿಂಗಳಲ್ಲಿ ಆಯೋಜಿಸಲು ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಎಂ.ಆರ್. ರವಿ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯ ಕೇಸ್ವಾನ್ ಸಭಾಂಗಣದಲ್ಲಿ ಬುಧವಾರ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳೊಂದಿಗೆ ಮಹತ್ವದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಬೆಂಗಳೂರಿನ ಬಿಯಾಂಡ್ ಎಕ್ಸಲೆನ್ ಸ್ಪೋರ್ಟ್ಸ್ ಟ್ರಸ್ಟ್ ಸಂಸ್ಥೆಯಿಂದ ಮ್ಯಾರಥಾನ್‌ನನ್ನು ಆಯೋಜಿಸಿದ್ದು, ದೇಶ-ವಿದೇಶಗಳ ಓಟಗಾರರು ಇದರಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಲಡಾಖ್ ಮತ್ತು ರನ್ ಆಫ್ ಕಚ್ ಮ್ಯಾರಥಾನ್‌ಗಳ ಮಾದರಿಯಲ್ಲಿ ಕೆಜಿಎಫ್ ಅನ್ನು ಕೂಡ ಅಂತಾರಾಷ್ಟ್ರೀಯ ಕ್ರೀಡಾ ಭೂಪಟದಲ್ಲಿ ಗುರುತಿಸುವಂತೆ ಮಾಡುವುದು, ಇಲ್ಲಿನ ಪ್ರವಾಸೋದ್ಯಮ ಹಾಗೂ ಸಣ್ಣ ಉದ್ದಿಮೆಗಳಿಗೆ ಈ ಮೂಲಕ ಪ್ರೋತ್ಸಾಹ ನೀಡುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ಅವರು ತಿಳಿಸಿದರು.

ಕ್ರೀಡಾಕೂಟದಲ್ಲಿ 5 ಮೈಲಿ (8 ಕಿ.ಮೀ), 10 ಮೈಲಿ (16 ಕಿ.ಮೀ), 50 ಕಿ.ಮೀ ಮತ್ತು 100ಕಿ.ಮೀ ವಿಭಾಗಗಳ ಓಟ ಆಯೋಜಿಸಲು ಯೋಜಿಸಿದೆ. ಸ್ಥಳೀಯ ಶಾಲಾ-ಕಾಲೇಜು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಹೆಚ್ಚುವರಿಯಾಗಿ 3 ಕಿ.ಮೀ ಓಟ ಸೇರಿಸಲು ಸಭೆಯಲ್ಲಿ ನಿರ್ಧರಿಸಿದೆ ಎಂದರು.

ಕೆಜಿಎಫ್ ನಗರಸಭೆ ಮೈದಾನದಿಂದ (ರಾಬರ್ಟ್‌ಸನ್ ಪೇಟೆ) ಮ್ಯಾರಥಾನ್ ಆರಂಭಗೊಂಡು, ಅಲ್ಲಿನ ಐತಿಹಾಸಿಕ ತಾಣಗಳು, ಸ್ಮಿತ್ ರೋಡ್, ಚಾಂಪಿಯನ್ ರೀಫ್ಸ್, ಕೋಟಿಲಿಂಗೇಶ್ವರ ಕ್ಷೇತ್ರ ಮಾರ್ಗದಲ್ಲಿ ಸಾಗಲಿದೆ ಎಂದರು.

ವಲಸಿಗರಿಗೆ ಕನ್ನಡ ಭಾಷೆ, ಸಂಸ್ಕೃತಿ ಕಲಿಸುವುದು ಕನ್ನಡಿಗರ ಕರ್ತವ್ಯ

ಬಂಗಾರಪೇಟೆ ತಾಲೂಕು ಕಸಾಪ ಅಧ್ಯಕ್ಷ ಅಶ್ವಥ್ ಸಲಹೆ



ಕಸಾಪ ಸಂಸ್ಥಾಪನಾ ದಿನಾಚರಣೆಯಲ್ಲಿ ಮುಖ್ಯ ಭಾಷಣಕಾರರಾಗಿ ಬಿ. ನಾಗರಾಜ್ ಮಾತನಾಡಿದರು.

• **ಕನ್ನಡಪ್ರಭ ವಾರ್ತೆ** ಬಂಗಾರಪೇಟೆ

ಕನ್ನಡ ನಾಡು ನುಡಿ ಸಂಸ್ಕೃತಿಯ ಪ್ರಾತಿನಿಧಿಕ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು, ನಮ್ಮೆಲ್ಲರ ಹೆಮ್ಮೆಯ ಪ್ರತೀಕವಾಗಿದೆ ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಘಟಕದ ಅಧ್ಯಕ್ಷ ಆರ್. ಅಶ್ವತ್ ಹೇಳಿದರು.

ನಗರದ ಬಸವೇಶ್ವರ ದೇವಾಲಯ ಆವರಣದಲ್ಲಿ ತಾಲೂಕು ಘಟಕದ ವತಿಯಿಂದ ಆಯೋಜಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

2000 ವರ್ಷಗಳ ಇತಿಹಾಸವುಳ್ಳ ಕನ್ನಡ ಭಾಷೆಯ ಉಳಿವು ಮತ್ತು ಬೆಳವಣಿಗೆಗಾಗಿ ಎಲ್ಲರೂ ಬದ್ಧರಾಗಿರಬೇಕು. ಇಂದು ಉದ್ಯೋಗ ಮತ್ತು ಜೀವನಕ್ಕಾಗಿ ಹಲವಾರು ರಾಜ್ಯಗಳ ಜನರು ಕರ್ನಾಟಕದಲ್ಲಿ ನೆಲೆಸುತ್ತಿದ್ದಾರೆ. ಅವರಿಗೆ ನಮ್ಮ ಭಾಷೆ ಮತ್ತು ಸಂಸ್ಕೃತಿಯ ಪರಿಚಯ ಮಾಡಿಸಬೇಕಾಗಿರುವುದು ಪ್ರತಿಯೊಬ್ಬ ಕನ್ನಡಿಗರ ಕರ್ತವ್ಯವಾಗಿದೆ. ತಾಲೂಕು ಘಟಕದ ವತಿಯಿಂದ ನಿರಂತರವಾಗಿ ಕನ್ನಡ ಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಪ್ರತಿಯೊಬ್ಬರೂ ಕನ್ನಡ ಭಾಷೆ ಉಳಿವಿಗಾಗಿ ಶ್ರಮಿಸಬೇಕೆಂದು ಅವರು ಕರೆ ನೀಡಿದರು.

ಬೂದಿಕೋಟೆ ಸಿ.ಆರ್.ಪಿ. ನಾಗರಾಜ್ ಮಾತನಾಡಿ ಜಿಲ್ಲೆಯಲ್ಲೂ ಪರಿಷತ್ತು ಗಟ್ಟಿನೆಲೆಯಿಂದ ಗಡಿಭಾಗದಲ್ಲೂ ಕನ್ನಡ ಪರ ಕಾರ್ಯಕ್ರಮಗಳನ್ನು ಮೊಳಗಿಸುತ್ತಿರುವುದು ಹೆಮ್ಮೆಯಾಗಿದೆ. ಸುಮಾರು 6 ಕೋಟಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಲ್ಲಿ, ಎಲ್ಲ ಕನ್ನಡಿಗರು ಸದಸ್ಯತ್ವ ಪಡೆಯುವ ಮೂಲಕ ತಮ್ಮ ಅಭಿಮಾನವನ್ನು ತೋರಿಸಬೇಕೆಂದು. ಜಿಲ್ಲೆಯಲ್ಲಿ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ನಡೆಸಬೇಕು ಎಂಬುದು ಎಲ್ಲರ ಹೆಬ್ಬಯಕೆ ಎಂದರು.

ಜಿಲ್ಲಾ ಕಸಾಪ ನಿಕಟಪೂರ್ವ ಅಧ್ಯಕ್ಷ ರಾಮ್ ಪ್ರಸಾದ್, ಟಿ.ಆರ್. ಮುನಿನಾರಾಯಣ, ಮೈ ಸತೀಶ್ ಕುಮಾರ್, ಸಾಹಿತಿ ವೆಂಕೋಬರಾವ್ ಪಡುತಾರೆ, ಕವಿ ಲಕ್ಷ್ಮಯ್ಯ, ಕುಮದಿನಿ, ಶ್ರೀಶೈಲ ಶೆಟ್ಟರ್, ಟೈಲರ್ ನಾರಾಯಣಸ್ವಾಮಿ, ಎಸ್.ಎ. ನಾಗರಾಜಪ್ಪ, ಶಿಕ್ಷಕ ವೆಂಕಟೇಶ್ (ದಾಸ್), ವೆಂಕಟಾಚಲಪತಿ, ಶಿವಕುಮಾರ್, ಬಾಲಕೃಷ್ಣ, ವೆಂಕಟರಾಮ್, ಮಾಕಾರಹಳ್ಳಿ ನಾಗರಾಜ್ ಇದ್ದರು.

ಕೋಮುಲ್ ಮೇಲೆ ಅಕ್ರಮ ಆರೋಪ ಮಾಡುವುದು ಸಲ್ಲ: ಕಲ್ಲೂರು ಮಂಜು

ಮಾಜಿ ಶಾಸಕ ಮಂಜುನಾಥಗೌಡರಿಗೆ ಕೋಮುಲ್ ನಿರ್ದೇಶಕ ತಿರುಗೇಟು

• **ಕನ್ನಡಪ್ರಭ ವಾರ್ತೆ** ಶ್ರೀನಿವಾಸಪುರ

ಮಾಲೂರು ರಾಜಕಾರಣಕ್ಕಾಗಿ ಕೋಲಾರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ (ಕೋಮುಲ್)ದ ಆಡಳಿತ ಮಂಡಳಿ ಮೇಲೆ ಅಕ್ರಮ ನಡೆದಿದೆ ಎಂದು ಆರೋಪ ಮಾಡುವುದು ಸೂಕ್ತ ಅಲ್ಲ ಎಂದು ಕೋಮುಲ್ ನಿರ್ದೇಶಕ ಕಲ್ಲೂರು ಮಂಜು ಹೇಳಿದ್ದಾರೆ.

ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಮಾಜಿ ಶಾಸಕ ಮಂಜುನಾಥಗೌಡ ಅವರು ತಮ್ಮ ಹಾಗೂ ಹಾಲಿ ಶಾಸಕ, ಕೋಮುಲ್ ಅಧ್ಯಕ್ಷ ನಂಜೇಗೌಡ ಅವರ ನಡುವಿನ ರಾಜಕೀಯ ದ್ವೇಷಕ್ಕಾಗಿ ಪದೇಪದೇ ಕೋಮುಲ್ ಹೆಸರು ಬಳಸಿ ಅಕ್ರಮ ನಡೆ ಯುತ್ತಿದೆ ಎಂದು ಆರೋಪಿಸುವುದು ಸೂಕ್ತ ಅಲ್ಲ. ಇದರಿಂದ ಒಕ್ಕೂಟದ ಹಿತಾಸಕ್ತಿಗೆ ಧಕ್ಕೆಯಾಗುತ್ತದೆ. ನಿಮ್ಮ ರಾಜಕೀಯ ಆರೋಪ-ಪ್ರತ್ಯಾರೋಪ ಮಾಲೂರಿಗೆ ಸೀಮಿತವಾಗಿರಲಿ ಎಂದು ಮಂಜುನಾಥ ಗೌಡರಿಗೆ ತಿರುಗೇಟು ನೀಡಿದ್ದಾರೆ. ಸಾಮಾಜಿಕ ಕಾರ್ಯಕರ್ತ ಗೂಳಿಗಾನಹಳ್ಳಿ ನಾಗರಾಜ್ ಹಾಗೂ ವಕೀಲ ವೆಂಕಟಾಚಲಪತಿ ಮಾಡಿರುವ ಕೋಮೂಲ್ ಮೇಲಿನ ಆರೋಪದಲ್ಲಿ ಯಾವುದೆ ಉರುಳಿಲ್ಲ. ನೇಮಕಾತಿ ವಿಚಾರವಾಗಿ ಇಡಿ ತನಿಖೆಯಾಗಿದೆ. ಲೋಕಾಯುಕ್ತದಲ್ಲಿ ಪ್ರಕರಣ ದಾಖಲಾಗಿ ವಿಚಾರಣೆ ನಡೆಯುತ್ತಿದೆ. ಈಗಾಗಲೇ ಹನ್ನೆರಡು ವರ್ಷಗಳ ಹಣದ ವಹಿವಾಟಿನ ಆಡಿಟ್ ಬಹಿರಂಗ ಮಾಡಲಾಗಿದೆ. ಎಲ್ಲಾ ಪಾರದರ್ಶಕವಾಗಿದೆ. ಚಿಂತಾಮಣಿ ಐಸ್‌ಕ್ರೀಮ್ ತಯಾರಿಕಾ ಘಟಕಕ್ಕೆ ಕೋಚಿ ಮೂಲ್ ಇಬ್ಭಾಗ ಆಗುವ ಮೊದಲು ನಡೆದಿರುವುದು ಈಗ ಇಲ್ಲದ ಆರೋಪ ಮಾಡುವುದು ಸರಿಯಲ್ಲ ಎಂದರು.

ರಾಜಕಾಲುವೆಗಳ ಒತ್ತುವರಿ ತೆರವಿಗೆ ರೈತ ಸಂಘ ಒತ್ತಾಯ

ರೈತ ಸಂಘದಿಂದ ನಗರಸಭೆ ಆಯುಕ್ತರಿಗೆ ಮನವಿ



ಮುಳಬಾಗಿಲಿನಲ್ಲಿ ರಾಜಕಾಲುವೆಗಳ ಒತ್ತುವರಿ ತೆರವುಗೊಳಿಸಬೇಕೆಂದು ರೈತ ಸಂಘದ ಕಾರ್ಯಕರ್ತರು ನಗರಸಭಾ ಆಯುಕ್ತರಿಗೆ ಮನವಿ ಸಲ್ಲಿಸಿದರು.

• **ಕನ್ನಡಪ್ರಭ ವಾರ್ತೆ** ಮುಳಬಾಗಿಲು

ನಗರಾದ್ಯಂತ ಒತ್ತುವರಿಯಾದ ರಾಜಕಾಲುವೆ ತೆರವುಗೊಳಿಸಲು ಹಾಗೂ ಇ-ಖಾತೆ ಮಾಡಲು ವಿಶೇಷ ತಂಡ ರಚನೆ ಮಾಡಿ ನಗರದಲ್ಲಿ ಕುಡಿಯುವ ನೀರು ಹಾಗೂ ಮೂಲ ಸೌಕರ್ಯಗಳನ್ನು ಒದಗಿಸಿ ಇಲಾಖೆಯಲ್ಲಿ ನಡೆದಿರುವ ಭ್ರಷ್ಟಾಚಾರ ತನಿಖೆ ಮಾಡಬೇಕೆಂದು ಒತ್ತಾಯಿಸಿ ರೈತ ಸಂಘ ನಗರಸಭೆ ಆಯುಕ್ತರಿಗೆ ಮನವಿ ಸಲ್ಲಿಸಿತು.

ಜನನಪ್ರಮಾಣಪತ್ರದಿಂದ ಮರಣಪ್ರಮಾಣ ಪತ್ರ ಪಡೆಯುವವರಿಗೆ ಕುಡಿಯುವ ನೀರಿನಿಂದ ಕಸಕ್ಕೆ ಮುಕ್ತಿ ನೀಡುವ ಜೊತೆಗೆ ಇ-ಖಾತೆ ಮಾಡಲು ಹಣ ನೀಡದ ಜನ ಸಾಮಾನ್ಯರ ಯಾವುದೇ ಕೆಲಸಗಳು ನಗರಸಭೆಯಿಂದ ಆಗುತ್ತಿಲ್ಲವೆಂದು ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಪಾರುಕ್ ಪಾಷ ಆಕ್ರೋಶ ವ್ಯಕ್ತಪಡಿಸಿದರು.

ನಗರಸಭೆಯ ಅಧಿಕಾರಿಗಳು ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಜನರ ಸಮಸ್ಯೆಗೆ ಸ್ಪಂದಿಸಬೇಕಾದ ಆಯುಕ್ತರು, ಕಚೇರಿಯಲ್ಲಿ ಜನರ ಕೈಗೆ ಸಿಗದೆ ಚಿಕ್ಕಪುಟ್ಟ ಕೆಲಸಗಳಿಗೂ ಕೂಲಿ ನಾಲಿ ಬಿಟ್ಟು ನಗರದ ಜನತೆ ನಗರಸಭೆಗೆ ಅಲೆದಾಡಬೇಕಾದ ಪರಿಸ್ಥಿತಿ ಇದೆ. ಜೊತೆಗೆ ಬೇಸಿಗೆ ಪ್ರಾರಂಭವಾಗಿ ಕುಡಿಯುವ ನೀರು ಸ್ವಚ್ಛತೆ ಇಲ್ಲದೆ ಪರದಾಡುವ ಜೊತೆಗೆ ಆರೋಗ್ಯವಂತವಾಗಿರುವ ಜನರು ಅನಾರೋಗ್ಯವಂತರಾಗಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಆಯುಕ್ತರ ಭರವಸೆ: ಮನವಿ ಸ್ವೀಕರಿಸಿ ಮಾತನಾಡಿದ ನಗರಸಭೆ ಆಯುಕ್ತ ಆಂಜನೇಯಲು, ಬೇಸಿಗೆಯಲ್ಲಿ ಕುಡಿಯುವ ನೀರು, ಸ್ವಚ್ಛತೆಗೆ ಆದ್ಯತೆ ನೀಡುವ ಜೊತೆಗೆ ಒತ್ತುವರಿಯಾಗಿರುವ ರಾಜಕಾಲುವೆಗಳನ್ನು ತೆರವುಗೊಳಿಸುತ್ತೇವೆ. ಎಲ್ಲಾ ದಾಖಲೆಗಳನ್ನು ನೀಡಿದರೆ, ಇ-ಖಾತೆ ಮಾಡಿಕೊಡುವ ಭರವಸೆ ನೀಡಿದರು.

ಹೋರಾಟದಲ್ಲಿ ತಾಲೂಕು ಪ್ರಧಾನ ಕಾರ್ಯದರ್ಶಿ ರಾಜೇಶ್, ರೈತಸಂಘದ ರಾಜ್ಯ ಉಪಾಧ್ಯಕ್ಷ ಕೆ. ನಾರಾಯಣಗೌಡ, ತಾಲೂಕು ಅಧ್ಯಕ್ಷ ಯಲುವಳ್ಳಿ ಪ್ರಭಾಕರ್, ಹೆಬ್ಬಣಿ ಆನಂದರೆಡ್ಡಿ, ಸುನಿಲ್ ಕುಮಾರ್, ಭಾಸ್ಕರ್, ಜುಬೇರ್‌ಪಾಷ, ನಾಗರಾಜ್, ಮಂಗಸಂದ್ರ ತಿಮ್ಮಣ್ಣ, ಜಿಲ್ಲಾ ಅಧ್ಯಕ್ಷ ಈಕಂಬಳ್ಳಿ ಮಂಜುನಾಥ, ವೇಣು, ಕೇಶವ, ಪುತ್ತೇರಿ ರಾಜು, ಸುಪ್ರೀಂ ಚಲ, ಗಿರೀಶ್, ಧರ್ಮ, ಹೆಬ್ಬಣಿ ಆನಂದರೆಡ್ಡಿ, ನಂಗಲಿ ನಾಗೇಶ್ ಇದ್ದರು.

ತಾತಯ್ಯ ಸ್ಮರಣೆ ಕೈವಾರ ಶ್ರೀ ಯೋಗಿ ನಾರೇಯಣ ಮಠದ ವತಿಯಿಂದ ಕೈವಾರ ತಾತಯ್ಯನವರ 300ನೇ ಜಯಂತ್ಯುತ್ಸವ

ಭಾಗವತವು ಭಗವಂತನಲ್ಲಿ ನಂಬಿಕೆ ಹೆಚ್ಚಿಸುತ್ತದೆ: ಜಯರಾಮ್

• **ಕನ್ನಡಪ್ರಭ ವಾರ್ತೆ** ಚಿಕ್ಕಬಳ್ಳಾಪುರ

ಪರಮಾತ್ಮನನ್ನು ಯಾರು ನಂಬುತ್ತಾರೋ, ಅಂತಹವರನ್ನು ಭಗವಂತ ಎಂದಿಗೂ ಕೈ ಬಿಡುವುದಿಲ್ಲ. ದೇವರನ್ನು ನಂಬಬೇಕು. ಅಂತಹ ನಂಬಿಕೆಯು ಹೆಚ್ಚುವಂತೆ ಶ್ರೀಭಾಗವತವು ಮಾಡುತ್ತದೆ ಎಂದು ಕೈವಾರ ಕ್ಷೇತ್ರದ ಧರ್ಮಾಧಿಕಾರಿ ಡಾ.ಎಂ.ಆರ್. ಜಯರಾಮ್ ಅಭಿಪ್ರಾಯಪಟ್ಟರು.

ಕೈವಾರ ಶ್ರೀ ಯೋಗಿ ನಾರೇಯಣ ಮಠದ ವತಿಯಿಂದ ಒಂದು ವರ್ಷ ಕಾಲ ಹಮ್ಮಿಕೊಳ್ಳಲಾಗಿರುವ ಕೈವಾರ ತಾತಯ್ಯನವರ 300 ನೇ ಜಯಂತ್ಯುತ್ಸವದ ಕಾರ್ಯಕ್ರಮದ ಅಂಗವಾಗಿ ಪೋತನ ಭಾಗವತ ಹಾಗೂ ಅಮರನಾರೇಯಣ ಶತಕದ ಪ್ರವಚನ ಸಪ್ತಾಹವನ್ನು ನಗರದ ಧರ್ಮಛತ್ರದ ರಸ್ತೆಯ ಶ್ರೀವಿದ್ಯಾಗಣಪತಿ ದೇವಾಲಯದಲ್ಲಿ ಉದ್ಘಾಟಿಸಿ ಮಾತನಾಡಿದರು.

ಭಗವಂತನ ಅವತಾರ ಮತ್ತು ಲೀಲೆಗಳನ್ನು ಕುರಿತು ಭಾಗವತವು ರಚಿತವಾಗಿದೆ. ಭಾಗವತದಲ್ಲಿರುವ ಕಥೆಗಳು ಮಹತ್ವಪೂರ್ಣವಾದುದು. ಭಾಗವತವು ಗುರು ಉಪದೇಶವಿದ್ದಂತೆ. ಗುರು ಉಪದೇಶವೆಂದರೆ ಆತ್ಮದ ಉದ್ಧಾರ. ಭಾಗವತದ ಸಂದೇಶಗಳಿಂದ ಆತ್ಮಪ್ರಕಾಶವಾಗುತ್ತದೆ. ಗುರುಗಳು ಹೇಳಿರುವ ಸಾಧನೆಯ ಮಾರ್ಗವನ್ನು ಅನುಸರಿಸಿದರೆ ಪರಮಾತ್ಮನ ದರ್ಶನವನ್ನು ಮಾಡಬಹುದು. ನಮ್ಮಲ್ಲಿರುವ ಶತ್ರುಗಳಾದ ಆಸೆ, ಕ್ರೋಧ, ದ್ವೇಷ, ಮಾತ್ಸರ್ಯಗಳನ್ನು ಹೊಡೆದೋಡಿಸಲು ಶ್ರೀ ಭಾಗವತವು ಸಹಕಾರಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಖ್ಯಾತ ಭಾಗವತ ಪ್ರವಚನಕಾರ ಮಂಕಾಲ ಶ್ರೀಹರಿಶರ್ಮ ಪೋತನ ಭಾಗವತ ಹಾಗೂ ಅಮರನಾರೇಯಣ ಶತಕದ ಪ್ರವಚನವನ್ನು ನೀಡಿದರು. ಪ್ರವಚನ ದಲ್ಲಿ ಪೋತನ ಭಾಗವತದ ಹಲವಾರು ಘಟ್ಟಗಳನ್ನು ವಿವರಿಸಿ ವ್ಯಾಖ್ಯಾನಿಸಿದರು. ಏಳು ದಿನ ಗಳ ಕಾಲ ಸಂಜೆ 6.30 ರಿಂದ 8 ಗಂಟೆವರೆಗೂ ಈ ಭಾಗವತ ಸಪ್ತಾಹವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮಕ್ಕೂ ಮುನ್ನ ದೇವಾಲಯದಲ್ಲಿ ಪೂಜೆ ಸಲ್ಲಿಸಲಾಯಿತು. ವಿದ್ವಾನ್ ಚಿಂತಲಪಲ್ಲಿ ಸೋಮಶೇಖರ್ ಹಾಗೂ ಚಿಂತಲಪಲ್ಲಿ ಕಿಶೋರ್ ಕುಮಾರ್ ಶಿಷ್ಯವೃಂದದಿಂದ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ವಿದುಷಿ ಶಾಂತಲಾ ಅರಸ್ ತಂಡ ಪ್ರಾರ್ಥಿಸಿತು.

ಕಾರ್ಯಕ್ರಮದಲ್ಲಿ ಕೈವಾರ ಯೋಗಿನಾರೇಯಣ ಟ್ರಸ್ಟ್ ಉಪಾಧ್ಯಕ್ಷ ಜೆ. ವಿಭಾಕರರೆಡ್ಡಿ, ಖಜಾಂಚಿ ಆರ್.ಪಿ.ಎಂ. ಸತ್ಯನಾರಾಯಣ, ಸದಸ್ಯರಾದ ಕೆ. ನರಸಿಂಹಪ್ಪ, ಗಣೇಶ್ ಚಂದ್ರಪ್ಪ, ಕೆ.ವಿ. ಸುರೇಶ್, ಶ್ರೀಯೋಗಿನಾರೇಯಣ ಸಂಕೀರ್ತನಾ ಯೋಜನೆ ಸಂಚಾಲಕ ವಾನರಾಶಿ ಬಾಲಕೃಷ್ಣ ಭಾಗವತರ್, ಕೆ.ವಿ. ವಿದ್ಯಾಸಂಸ್ಥೆಗಳ ಅಧ್ಯಕ್ಷ ಕೆ.ವಿ. ನವೀನ್‌ಕಿರಣ್, ರಾಮಕೋಟಿಯ ಅಧ್ಯಕ್ಷ ಪುರದಗಡ್ಡೆ ಕೃಷ್ಣಪ್ಪ, ರಾಮಕೋಟಿ ಉಪಾಧ್ಯಕ್ಷ ರಂಗಣ್ಣ, ಜಿ.ಎನ್. ವೆಂಕಟೇಶ್, ನಿವೃತ್ತ ಶಿಕ್ಷಕ ಗುಡಿಬಂಡೆ ಗಂಗಾಧರ್, ಗಾಯಿತ್ರಿ ಮಹಿಳಾ ಮಂಡಳಿ ಸದಸ್ಯರು, ಬಾಲಕೃಷ್ಣ ಭಜನಾ ಮಂಡಳಿಯ ಕಲಾವಿದರು, ಲಲಿತಾ ಮಾತೃ ಮಂಡಳಿ ಸದಸ್ಯರು, ರಾಮಕೋಟಿ ಸದಸ್ಯರು ಮತ್ತು ಅಧಿಕ ಸಂಖ್ಯೆಯಲ್ಲಿ ಭಕ್ತರು ಇದ್ದರು.



ಕೈವಾರ ತಾತಯ್ಯನವರ 300 ನೇ ಜಯಂತ್ಯುತ್ಸವದ ಅಂಗವಾಗಿ ಪೋತನ ಭಾಗವತ ಹಾಗೂ ಅಮರನಾರೇಯಣ ಶತಕದ ಪ್ರವಚನ ಸಪ್ತಾಹವನ್ನು ಡಾ.ಎಂ.ಆರ್. ಜಯರಾಮ್ ಉದ್ಘಾಟಿಸಿದರು.

ಕುಡಿವ ನೀರಿಗೆ ತೊಂದರೆ ಇಲ್ಲ

ನೀರಿನ ಆದಾಲತ್ ಉದ್ಘಾಟಿಸಿ ಇಒ ವೆಂಕಟೇಶಪ್ಪ ಭರವಸೆ



ಬೇತಮಂಗಲದಲ್ಲಿ ಕುಡಿಯುವ ನೀರು ಪೂರೈಕೆ ಕುರಿತಂತೆ ಗ್ರಾಪಂ ಆಡಳಿತಾಧಿಕಾರಿ ಇಒ ವೆಂಕಟೇಶಪ್ಪ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

• **ಕನ್ನಡಪ್ರಭ ವಾರ್ತೆ** ಬೇತಮಂಗಲ

ಈ ವರ್ಷ ಬೇಸಿಗೆಯು ಬಿಸಿಲಿನ ತಾಪ ತೀವ್ರಗೊಂಡಿದೆ. ದಿನೇ ದಿನೇ ಬೇಸಿಗೆಯ ಬಿಸಿಲಿನ ತಾಪ ಹೆಚ್ಚಾಗಿರುವುದರಿಂದ ಜನರು ಕಂಗಾಲಾಗಿದ್ದಾರೆ. ಇದರಿಂದ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆಯೂ ಹೆಚ್ಚಾಗಲಿದೆಯೇ ಎಂಬ ಆತಂಕದಿಂದ ಸರ್ಕಾರವು ಹಾಗೂ ಗ್ರಾಪಂಗಳು ಎಚ್ಚೆತ್ತುಕೊಂಡು ಕ್ರಮಕ್ಕೈಗೊಳ್ಳಲಾಗುತ್ತಿದೆ. ಪ್ರತಿಯೊಂದು ಗ್ರಾಮ ದಲ್ಲೂ ಕೊಳವೆಬಾವಿ ಹೆಚ್ಚಾಗಿದ್ದು, ಕೊಳವೆ ಬಾವಿಗಳಿಂದ ಕುಡಿಯುವ ನೀರು ಸರಬ ರಾಜು ಮಾಡಲು ಕ್ರಮಕ್ಕೈಗೊಳ್ಳಲಾಗಿದೆ ಎಂದು ಗ್ರಾಪಂ ಆಡಳಿತಾಧಿಕಾರಿ ಇಒ ವೆಂಕಟೇಶಪ್ಪ ಹೇಳಿದರು. ಗ್ರಾಪಂ 7ನೇ ಬ್ಲಾಕ್‌ನಲ್ಲಿ ನೀರಿನ ಅದಾಲತ್ ಉದ್ಘಾಟಿಸಿ ಮಾತನಾಡಿ ನೀರಿನ ಅಭಾವವಾಗದಂತೆ ನೋಡಿಕೊಳ್ಳಬೇಕು, ಸ್ವಚ್ಛತೆಗೆ ಆದ್ಯತೆಗೆ ತೀರ್ಮಾನಿಸಿದೆ ಎಂದರು. ಪಿಡಿಒ ವಸಂತ್ ಕುಮಾರ್ ಮಾತನಾಡಿದರು. ಕಾರ್ಯದರ್ಶಿ ರಾಜಣ್ಣ, ಮಾಜಿ ಅಧ್ಯಕ್ಷ ವಿನೂ ಕಾರ್ತಿಕ್, ಶೇಷಾದ್ರಿ, ಸುಕನ್ಯಾ ಇದ್ದರು.

ಮಹಿಳಾ ಸಬಲೀಕರಣ, ಮಹಿಳೆಯರ ಬೆಳವಣಿಗೆ, ಮಹಿಳೆಯ ಸಾಮಾಜಿಕ ನ್ಯಾಯಕ್ಕಾಗಿ ಚರ್ಚೆ ಅಗತ್ಯವಿತ್ತು, ಆದರೆ ಅದಕ್ಕೆ ಅವಕಾಶ ನೀಡದೆ, ವಿಪಕ್ಷಗಳ ಅಭಿಪ್ರಾಯ ಪರಿಗಣಿಸದೆ ಏಕಾಏಕಿ ಮೀಸಲಾತಿ ಬಿಲ್ ಪಾಸ್ ಮಾಡಿದ್ದು ಸರಿಯಲ್ಲ.

• **ರೂಪಕಲಾ ಶಶಿಧರ್** ಶಾಸಕಿ, ಕೆಜಿಎಫ್

ಸುದ್ದಿ ಸಿಂಚನ

ಕೃಷಿ ಹೊಂಡದಲ್ಲಿ ಬಿದ್ದು ಇಬ್ಬರು ಮಕ್ಕಳು ಸಾವು

ಬಂಗಾರಪೇಟೆ: ಆಕಸ್ಮಿಕವಾಗಿ ಕೃಷಿ ಹೊಂಡದಲ್ಲಿ ಬಿದ್ದು ಇಬ್ಬರು ಮಕ್ಕಳು ಮೃತಪಟ್ಟಿರುವ ಘಟನೆ ತಾಲೂಕಿನ ಕಾಮಸಮುದ್ರ ಠಾಣೆವ್ಯಾಪ್ತಿಯಲ್ಲಿನಡೆದಿದೆ. ತಾಲೂಕಿನ ಕಾಮಸಮುದ್ರ ಸಮೀಪದ ಬೊಡೇನಹಳ್ಳಿ ಗ್ರಾಮದ ತನುಶ್ರೀ (15) ಹಾಗೂ ಕಾರ್ತಿಕ್ (8) ಮೃತ ಮಕ್ಕಳಾಗಿದ್ದು, ತನುಶ್ರೀ ಗ್ರಾಮದ ಬಾಬು ಮತ್ತು ರೂಪ ದಂಪತಿಗಳ ಪುತ್ರಿಯಾಗಿದ್ದು, ಕಾರ್ತಿಕ್ ವರದರಾಜು ಶ್ಯಾಮಲ ದಂಪತಿಯ ಪುತ್ರ ಎಂದು ತಿಳಿದು ಬಂದಿದೆ. ತಾಲೂಕಿನ ನಲ್ಲಗುಟ್ಟಹಳ್ಳಿ ಜೀವನ್ ಪ್ರಗತಿ ಶಾಲೆಯಲ್ಲಿ ಮೂರನೇ ತರಗತಿಯಲ್ಲಿ ಕಾರ್ತಿಕ್ ಓದುತಿದ್ದರೆ, ತನುಶ್ರೀ ಇತ್ತೀಚೆಗಷ್ಟೇ ಬಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪಾಸಾಗಿದ್ದಳು. ಇಬ್ಬರೂ ಕೃಷಿ ಹೊಂಡದ ಬಳಿ ಆಟವಾಡುತ್ತಿದ್ದಾಗ ಮೊದಲು ಕಾರ್ತಿಕ್ ಆಕಸ್ಮಿಕವಾಗಿ ಕಾಲು ಜಾರಿ ಹೊಂಡದಲ್ಲಿ ಬಿದ್ದಾಗ ತನುಶ್ರೀ ರಕ್ಷಿಸಲು ಹೋಗಿ ಇಬ್ಬರೂ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ವಿಷಯ ತಿಳಿದ ತಕ್ಷಣ ತಹಸೀಲ್ದಾರ್‌ಕೆ.ಎನ್. ಸುಜಾತ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಶಶಿಕಲಾ ಕೆ.ಎಂ. ಸ್ಥಳಕ್ಕೆ ಭೇಟಿ ನೀಡಿದರು. ಮಕ್ಕಳನ್ನು ಕಳೆದುಕೊಂಡು ಶೋಕತಪ್ತರಾದ ಪೋಷಕರಿಗೆ ಸಾಂತ್ವನ ಹೇಳಿದರು.

ತತ್ವಪದ ವಿಮರ್ಶಾ ಲೇಖನ ಸ್ಪರ್ಧೆಗೆ ಆಹ್ವಾನ

ಚಿಕ್ಕಬಳ್ಳಾಪುರ: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ರಾಜ್ಯಮಟ್ಟದ ತತ್ವಪದ ವಿಮರ್ಶಾ ಲೇಖನ ಸ್ಪರ್ಧೆಯನ್ನು ಏರ್ಪಡಿಸಲು ಉದ್ದೇಶಿಸಿದೆ. 18 ರಿಂದ 40 ವರ್ಷ ವಯೋಮಿತಿಯುಳ್ಳವರು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಸ್ಪರ್ಧೆಗೆ ಅಧ್ಯಯನ ಕೇಂದ್ರವು ನೀಡಿರುವ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಆಯ್ಕೆ ಮಾಡಿ ವಿಮರ್ಶಾ ಲೇಖನವನ್ನು ರಚಿಸಿ ಸ್ಪರ್ಧೆಗೆ ಆಹ್ವಾನ ನೀಡಿದ ದಿನದಿಂದ ಒಂದು ತಿಂಗಳ ಒಳಗೆ ಅಂದರೆ ಜೂನ್ 5 ರೊಳಗೆ ಭಾಗವಹಿಸುವ ಸ್ಪರ್ಧಿಯು ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು-560056 ಈ ವಿಳಾಸಕ್ಕೆ ಕಳುಹಿಸಬೇಕು. ಅರ್ಜಿ ಮತ್ತು ಲೇಖನವನ್ನು ಅಂಚೆ, ಕೊರಿಯರ್, ಇ ಮೇಲ್ ಅಥವಾ ಖುದ್ದಾಗಿ ಸಲ್ಲಿಸಬಹುದು. ಅರ್ಜಿ ನಮೂನೆಯನ್ನು website: https://kanakadasaresearchcenter.karnataka.gov.in ನಲ್ಲಿ ಅಪ್ ಲೋಡ್ ಮಾಡಲಾಗಿದ್ದು, ವೆಬ್ ಸೈಟ್ ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ 9743545865 ಗೆ ಸಂಪರ್ಕಿಸಬಹುದು.

ಕೋಲಾರದಲ್ಲಿ ಇಂದು ಜಾಗತಿಕ ತಾಪಮಾನ ಬಗ್ಗೆಸಂವಾದಕಾರ್ಯಕ್ರಮ

ಕೋಲಾರ: ಹೆಚ್ಚುತ್ತಿರುವ ಜಾಗತಿಕ ತಾಪಮಾನದ ದುಷ್ಪರಿಣಾಮಗಳ ಕುರಿತು ಜನಜಾಗೃತಿ ಮೂಡಿಸುವ ಸಲುವಾಗಿ ಮನ್ವಂತರ ಪ್ರಕಾಶನ, ಮನ್ವಂತರ ಮಾಧ್ಯಮ ಕೌಶಲ್ಯಾಭಿವೃದ್ಧಿ ತರಬೇತಿ ಸಂಸ್ಥೆ ಹಾಗೂ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಮೇ 7ರಂದು ನಗರದ ಪತ್ರಕರ್ತರ ಭವನದಲ್ಲಿ ವಿಶೇಷ ಸಂವಾದ ಹಾಗೂ ಬಹುಮಾನ ವಿತರಣಾ ಕಾರ್ಯಕ್ರಮ ಆಯೋಜಿಸಿದೆ. ನವೋದಯ ಯುಗದ ಕವಿ ರವೀಂದ್ರನಾಥ್ ಟ್ಯಾಗೋರ್ ಜಯಂತಿ ಅಂಗವಾಗಿ ಗುರುವಾರ ಬೆಳಗ್ಗೆ 10ಕ್ಕೆ ಆಯೋಜಿಸಿರುವ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಡಾ.ಎಂ.ಆರ್.ರವಿ ಉದ್ಘಾಟಿಸಿ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಜಿಪಂ ಸಿಇಒ ಡಾ.ಪ್ರವೀಣ್ ಪಿ.ಬಾಗೇವಾಡಿ 'ಗ್ರಾಮೀಣ ಪರಿ ಸರ ಸಂರಕ್ಷಣೆ' ಕುರಿತು ವಿಚಾರ ಮಂಡನೆ ಮಾಡಲಿದ್ದು, ಬೆಂಗಳೂರು ಉತ್ತರ ವಿವಿ ಕುಲಪತಿ ಪ್ರೊ.ಬಿ.ಕೆ.ರವಿ ಅವರು ಪರಿಸರ ಪ್ರೇಮಿಗಳಿಗೆ ಸಸಿ ವಿತರಿಸಲಿದ್ದಾರೆ.

ಸಿ.ಕೆ. ಬಾಬುಗೆ ಕಾಯಕ ಯೋಗಿ ಪ್ರಶಸ್ತಿ ಪ್ರದಾನ

ಚಿಂತಾಮಣಿ: ಸಮಾಜದ ಏಳಿಗೆಗಾಗಿ ನಿರಂತರ



ಶ್ರಮಿಸುತ್ತಿರುವ ಚಿಂತಾಮಣಿ ನಗರಸಭೆಯ ಆರೋಗ್ಯ ನಿರೀಕ್ಷಕ, ಪರಿಸರ ಪ್ರೇಮಿ ಸಿ.ಕೆ.ಬಾಬು ಅವರು ರಾಜ್ಯ ಮಟ್ಟದ ಪ್ರತಿಷ್ಠಿತ ಕಾಯಕ ಯೋಗಿ-2026 ಪ್ರಶಸ್ತಿಗೆ ಭಾಜನರಾಗಿದ್ದಾರೆ. ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ವತಿಯಿಂದ ಹೊಸಕೋಟೆ ತಾಲೂಕಿನ ಸೂಲಿಬೆಲೆಯಲ್ಲಿ ಆಯೋಜಿಸಿದ್ದ ಅದ್ದೂರಿ ಸಮಾರಂಭದಲ್ಲಿ ಅವರಿಗೆ ಈ ಗೌರವವನ್ನು ಪ್ರದಾನ ಮಾಡಲಾಯಿತು. ಸುದೀರ್ಘ ಕಾಲದಿಂದ ಸಾರ್ವಜನಿಕ ಕ್ಷೇತ್ರದಲ್ಲಿ ಸಕ್ರಿಯರಾಗಿರುವ ಇವರು, ನಗರಸಭೆಯಲ್ಲಿನ ಕರ್ತವ್ಯದ ಜೊತೆಗೆ ಪರಿಸರ ಸಂರಕ್ಷಣೆ ಮತ್ತು ಶಿಕ್ಷಣ ಪ್ರಸಾರದಂತಹ ನಿಸ್ವಾರ್ಥ ಸೇವೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ.

ಮಹಿಳಾ ಮೀಸಲಿಗೆ ಕಾಂಗ್ರೆಸ್ ವಿರೋಧವಿಲ್ಲ: ಶಾಸಕಿ

ಮೀಸಲಾತಿ ಬಗ್ಗೆ ಅಧಿವೇಶನದಲ್ಲಿ ಚರ್ಚೆಗೆ ಅವಕಾಶ ನೀಡದ್ದಕ್ಕಷ್ಟೇ ಪಕ್ಷದ ವಿರೋಧ: ರೂಪಕಲಾ ಶಶಿಧರ್ ಸ್ಪಷ್ಟನೆ

• **ಕನ್ನಡಪ್ರಭ ವಾರ್ತೆ** ಕೋಲಾರ

ಮಹಿಳಾ ಮೀಸಲಾತಿಗೆ ಕಾಂಗ್ರೆಸ್ ವಿರೋಧವಿಲ್ಲ, ಆದರೆ ಮೀಸಲಾತಿಗೂ ಮುನ್ನ ಅಧಿವೇಶನದಲ್ಲಿ ಚರ್ಚೆಗೆ ಅವಕಾಶ ನೀಡದ ಕಾರಣಕ್ಕೆ ವಿರೋಧಿಸಲಾಯಿತು, ಕಾಂಗ್ರೆಸ್‌ಪಕ್ಷಮಾತ್ರವಲ್ಲಆಡಳಿತರೂಢ ಬಿಜೆಪಿ ಹೊರತುಪಡಿಸಿ ಎಲ್ಲಾ ಪಕ್ಷಗಳು ಸಾಮೂಹಿಕವಾಗಿ ವಿರೋಧಿಸಿವೆ ಎಂದು ಕೆಜಿಎಫ್ ಶಾಸಕಿ ರೂಪಕಲಾ ಶಶಿಧರ್ ಸ್ಪಷ್ಟಪಡಿಸಿದರು.



ಸುದ್ದಿಗೋಷ್ಠಿಯಲ್ಲಿ ಶಾಸಕಿ ರೂಪಕಲಾ ಶಶಿಧರ್ ಮಾತನಾಡಿದರು. ವಸಂತ ಕವಿತಾರೆಡ್ಡಿ, ಹೇಮಮಾಲಿನಿ, ನಾರಾಯಣಸ್ವಾಮಿ, ಮಂಜುನಾಥ್ ಮತ್ತಿತರರು ಇದ್ದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದೇಶಕ್ಕೆಮಹಿಳಾಸಬಲೀಕರಣಸಮಾನತೆಸ್ಥಾನಮಾನ ಕುರಿತು ಜಾಗೃತಿ ಅಗತ್ಯ. ಲೋಪದೋಷಗಳ ಕುರಿತು ಚರ್ಚಿಸದೆ ಏಕಾಏಕಿ ಮೀಸಲಾತಿ ಪ್ರಸ್ತಾಪಿಸಿರುವುದರಿಂದ ಎಲ್ಲಾ ವಿಪಕ್ಷಗಳು ವಿರೋಧಿಸಿದೆ ಹೊರತಾಗಿ ಮಹಿಳಾ ಮೀಸಲಾತಿ ಜಾರಿಗೆ ನಮ್ಮ ವಿರೋಧವಿಲ್ಲ ಎಂದು ಸ್ಪಷ್ಟಪಡಿಸಿದ್ದರೂ ಸಹ ಆಡಳಿತರೂಢ ಬಿಜೆಪಿ ಕಾಂಗ್ರೆಸ್‌ಪಕ್ಷದಮೇಲೆಸತ್ಯಕ್ಕೆದೂರವಾದಆರೋಪ ಮಾಡುತ್ತಿದೆ ಎಂದು ದೂರಿದರು.

ಮಹಿಳಾಸಬಲೀಕರಣ, ಮಹಿಳೆಯರಬೆಳವಣಿಗೆ, ಮಹಿಳೆಯ ಸಾಮಾಜಿಕ ನ್ಯಾಯಕ್ಕಾಗಿ ಚರ್ಚೆಗಳ ಅಗತ್ಯವಿತ್ತು, ಆದರೆ ಅದಕ್ಕೆ ಅವಕಾಶ ನೀಡದೆ, ವಿಪಕ್ಷಗಳ ಅಭಿಪ್ರಾಯ ಪರಿಗಣಿಸದೆ ಏಕಾಏಕಿ ಮಹಿಳಾ ಮೀಸಲಾತಿ ಬಿಲ್ ಪಾಸ್ ಮಾಡಲು ಮುಂದಾಗಿರುವುದನ್ನುವಿಪಕ್ಷಗಳುವಿರೋಧಿಸುವುದು ಸಮಂಜಸವಾಗಿದೆ ಎಂದರು.

ಯುಪಿಎ ಸರ್ಕಾರ ಸಿದ್ಧಪಡಿಸಿದ ಮಹಿಳಾ ಮೀಸಲಾತಿ ಮಸೂದೆಯನ್ನು 2023ರಲ್ಲಿ ಮಂಡಿಸಿ ಒಪ್ಪಿಗೆ ಪಡೆದು 2026ರ ಜನಗಣತಿ ನಂತರ ಕ್ಷೇತ್ರಗಳ ಪುನರ್‌ವಿಂಗಡಣೆಮಾಡಿನಂತರದಲ್ಲಿಜಾರಿಗೆತರುವ ಮಾತುಗಳನ್ನಾಡಿದ್ದ ಕೇಂದ್ರವು 5 ರಾಜ್ಯಗಳ ಚುನಾವಣೆಗಳ ಸಂದರ್ಭದಲ್ಲಿ ಜನರ ಬಳಿ ಹೋಗಲು ಮುಖವಿಲ್ಲದೆ ಮತ್ತೊಮ್ಮೆ ನಾರಿಶಕ್ತಿ ವಂದನ್ ಹೆಸರಿನಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸುವ ನಾಟಕವಾಡಿ ಮತದಾರರನ್ನು ಮರಳು ಮಾಡುವ ಸಂಚು ಹೂಡಿತ್ತು. ಮಹಿಳೆಯರ ಮೀಸಲಾತಿ ನಿಜವಾದ ವಿರೋಧಿಗಳು ಬಿಜೆಪಿ ಹೊರತಾಗಿ ಕಾಂಗ್ರೆಸ್ ಪಕ್ಷವಲ್ಲ ಎಂದು ಪ್ರತಿಪಾದಿಸಿದರು.

ಮಹಿಳಾ ಮೀಸಲಾತಿ ಚರ್ಚೆಗಳಾಗದೆ ಜಾರಿ ಮಾಡುವುದರಿಂದದಕ್ಷಿಣರಾಜ್ಯಗಳಲ್ಲಿಮಹಿಳೆಯರಿಗೆ ಸಾಮಾಜಿಕ ನ್ಯಾಯ ಸಿಗಲು ಸಾಧ್ಯವಾಗದು. ಉತ್ತರ ಭಾರತದಲ್ಲಿ ಶಿಕ್ಷಣಸ್ಥರ ಸಂಖ್ಯೆ ಕಡಿಮೆ ಇರುವುದು. ಆದರೆ ದಕ್ಷಿಣ ಭಾರತದಲ್ಲಿ ಶಿಕ್ಷಣಸ್ಥರ ಸಂಖ್ಯೆ ಹೆಚ್ಚಿದೆ ಎಂದು ವಿವರಿಸಿದರು.

ಕೆ.ಪಿ.ಸಿ.ಸಿ ಸದಸ್ಯೆ ವಸಂತ ಕವಿತಾರೆಡ್ಡಿ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಹೇಮಮಾಲಿನಿ, ಮುಖಂಡರಾದಮಂಗಳ, ಉಮಾದೇವಿ, ಭಾಗ್ಯಮ್ಮ, ನಾರಾಯಣಸ್ವಾಮಿ, ಮಂಜುನಾಥ್ ಇದ್ದರು.

ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್‌ಎಂ.ವಿ ದೂರದೃಷ್ಟಿಯ ಫಲ ಕಸಾಪ: ಪ್ರಮೀಳ

ನಗರದ ಗೋಲ್ಡನ್ ಗ್ಲೀಮ್ಸ್ ಕಾಲೇಜಲ್ಲಿ ಕಸಾಪ 112ನೇ ಸಂಸ್ಥಾಪನಾ ದಿನ

• **ಕನ್ನಡಪ್ರಭ ವಾರ್ತೆ** ಚಿಕ್ಕಬಳ್ಳಾಪುರ

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ ದೂರದೃಷ್ಟಿ ಹಾಗೂ ಸರ್‌ಎಂ. ವಿಶ್ವೇಶ್ವರಯ್ಯ ಮತ್ತುಸರ್‌ಮಿರ್ಜಾಇಸ್ಮಾಯಿಲ್ ರವರ ಶ್ರಮದಿಂದ 1915 ರಲ್ಲಿ ಸ್ಥಾಪಿಸಿದ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಅಸ್ಮಿತೆಯಾಗಿ ಕಾರ್ಯನಿರ್ವಹಿಸಿಕೊಂಡು ಬರುತ್ತಿದೆ. ಇಂದು ನೂರ ಹನ್ನೆರಡನೇ ವರ್ಷಕ್ಕೆಪಾದಾರ್ಪಣೆಮಾಡುತ್ತಿರುವುದು ಕನ್ನಡಿಗರ ಸೌಭಾಗ್ಯ ಎಂದು ಸಾಹಿತಿ, ಅಧ್ಯಾಪಕಿ ಬಿ.ಎಂ. ಪ್ರಮೀಳ ತಿಳಿಸಿದರು.



ನಗರದ ಗೋಲ್ಡನ್ ಗ್ಲೀಮ್ಸ್ ಕಾಲೇಜಿನಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ 112 ನೇ ಸಂಸ್ಥಾಪನಾ ದಿನಾಚರಣಾ ಕಾರ್ಯಕ್ರಮವನ್ನು ಸಾಹಿತಿ ಬಿ.ಎಂ.ಪ್ರಮೀಳ ಉದ್ಘಾಟಿಸಿದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಗರದ ಗೋಲ್ಡನ್ ಗ್ಲೀಮ್ಸ್ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ 112 ನೇ ಸಂಸ್ಥಾಪನಾ ದಿನಾಚರಣಾ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ನಡೆದು ಬಂದ ಹಾದಿ ಕುರಿತು ಉಪನ್ಯಾಸ ನೀಡಿದರು.

ಮೈಸೂರು ಸಂಸ್ಥಾನದ ಒಡೆಯರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ ಆಡಳಿತಾವದಿಯಲ್ಲಿ ಜನಸಾಮಾನ್ಯರ ಬದುಕಿಗೆಬೇಕಾಗಿರುವಆರೋಗ್ಯ, ಶಿಕ್ಷಣ, ಕೈಗಾರಿಕೆ, ಕೃಷಿ, ವಾಣಿಜ್ಯೋದ್ಯಮ ಎಲ್ಲಾ ವಿಭಾಗಗಳ ಅಭಿವೃದ್ಧಿಗೆ ಶ್ರಮಿಸಿ ಉತ್ತಮ ಆಡಳಿತ ನೀಡಿದರು. ಅದೇ ರೀತಿ ನಾಡು ನುಡಿ, ಕಲೆ, ಸಂಸ್ಕೃತಿಯ ಬೆಳವಣಿಗೆ ಒಂದು ಸಂಸ್ಥೆಯ ಅವಶ್ಯಕತೆಯನ್ನು ಮನಗಂಡು ನಾಡಿನ ಹಿರಿಯ ಸಾಹಿತಿ ದಿಗ್ಗಜರನ್ನೊಳಗೊಂಡಂತೆ ಸರ್.ಎಂ.ವಿಶ್ವೇಶ್ವರಯ್ಯನವರ ಸಹಕಾರದೊಂದಿಗೆ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು ಎಂದರು.

ಕಸಾಪ ಜಿಲ್ಲಾಧ್ಯಕ್ಷ ಡಾ. ಕೋಡಿರಂಗಪ್ಪ ಮಾತನಾಡಿದರು. ಇದೇ ಸಂದರ್ಭದಲ್ಲಿ ಹತ್ತನೇ ತರಗತಿಯಲ್ಲಿ 624 ಅಂಕ ಗಳಿಸಿ ರಾಜ್ಯಕ್ಕೆ ಎರಡನೇ ಸ್ಥಾನ ಪಡೆದ ಮಂಚನಬಲೆಯ ಪ್ರಣತಿ ರಾಜ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ತಾಲೂಕು ಕಸಾಪ ಅಧ್ಯಕ್ಷ ಯಲುವಹಳ್ಳಿ ಸೊಣ್ಣೇಗೌಡ, ಕಾರ್ಯದರ್ಶಿ ಕೆ.ಎಂ. ರೆಡ್ಡಪ್ಪ, ಕಾಲೇಜಿನ ಪ್ರಾಂಶುಪಾಲ ಸಿ.ಎಂ. ಮುನಿಕೃಷ್ಣಪ್ಪ, ವಾಪಸಂದ್ರ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಸಹಶಿಕ್ಷಕ ಟಿ.ವಿ. ರಾಜಣ್ಣ, ನಗರಸಭೆ ಮಾಜಿ ಸದಸ್ಯೆ ಜಿ. ಅಣ್ಣಮ್ಮ, ನಂದಿಹೋಬಳಿಕಸಾಪಘಟಕದ ಅಧ್ಯಕ್ಷ ಎಂ. ಮುನೇಗೌಡ, ಪದಾಧಿಕಾರಿಗಳಾದ ಕೆ.ಎಸ್. ನಾರಾಯಣಸ್ವಾಮಿ, ಶ್ರೀನಿವಾಸ್, ಸೌಭಾಗ್ಯ, ವಿದ್ಯಾರ್ಥಿಗಳು ಇದ್ದರು.

ಕನ್ನಡದ ಅಸ್ಮಿತೆ ಮರೆಯದಿರಿ: ಕೃಷ್ಣಕುಮಾರಿ

ಗುಡಿಬಂಡೆಯಲ್ಲಿ ಕಸಾಪ 112ನೇ ಸಂಸ್ಥಾಪನಾ ದಿನಾಚರಣೆ

• **ಕನ್ನಡಪ್ರಭ ವಾರ್ತೆ** ಗುಡಿಬಂಡೆ

ಪಟ್ಟಣದ ನ್ಯೂ ವಿಷನ್ ಆಂಗ್ಲ ಶಾಲೆಯಲ್ಲಿ ಗುಡಿಬಂಡೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಅರ್ಥಪೂರ್ಣವಾಗಿ ನೆರವೇರಿತು.



ಗುಡಿಬಂಡೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಅರ್ಥಪೂರ್ಣವಾಗಿ ನೆರವೇರಿತು.

ಈ ವೇಳೆ ಬಿಇಒ ಕೃಷ್ಣಕುಮಾರಿ ಮಾತನಾಡಿ, ಕನ್ನಡಿಗರ ವಿಶಾಲ ಮನೋಭಾವದ ನಡುವೆಯೂ ನಮ್ಮ ಭಾಷೆಯ ಅಸ್ಮಿತೆಯನ್ನು ಮರೆಯಬಾರದು. ಇಂದಿನ ದಿನಗಳಲ್ಲಿಪರಭಾಷೆಗಳನ್ನುಕಲಿಯುವುದು ಅನಿವಾರ್ಯವಿರಬಹುದು, ಆದರೆ ಮಾತೃಭಾಷೆಯನ್ನು ಮರೆಯುವುದು ಸರಿಯಲ್ಲ. ಕನ್ನಡದಲ್ಲಿರುವ ಆಪ್ತತೆ ಬೇರೆಲ್ಲೂ ಸಿಗದು. ಮಮ್ಮಿ-ಡ್ಯಾಡಿ ಸಂಸ್ಕೃತಿಯ ವ್ಯಾಮೋಹ ಬಿಟ್ಟು ಅಪ್ಪ-ಅಮ್ಮ ಎಂದು ಕರೆಯುವ ಮೂಲಕ ಸಂಸ್ಕೃತಿಯನ್ನು ಉಳಿಸಬೇಕು ಎಂದರು.

ಕನ್ನಡಸಾಹಿತ್ಯಪರಿಷತ್ತಿನನಿಕಟಪೂರ್ವ ಅಧ್ಯಕ್ಷಪ್ರೆಸ್‌ಸುಬ್ಬರಾಯಪ್ಪಮಾತನಾಡಿ, 1915ರಲ್ಲಿಮೈಸೂರಿನನಾಲ್ವಡಿಕೃಷ್ಣರಾಜ ಒಡೆಯರ್‌ಮತ್ತುಸರ್‌ಎಂ.ವಿಶ್ವೇಶ್ವರಯ್ಯ ಅವರ ದೂರದೃಷ್ಟಿಯಿಂದ ಸ್ಥಾಪನೆಯಾದ ಈ ಪರಿಷತ್ತು, ಇಂದು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿ 112 ವರ್ಷ ಪೂರೈಸಿರುವುದು ಹೆಮ್ಮೆಯ ವಿಷಯ ಎಂದರು.

ಸರ್ಕಾರಿನೌಕರರಸಂಘದಗೌರವಾಧ್ಯಕ್ಷ ಸ.ನ. ನಾಗೇಂದ್ರ ಅವರು ತಾಲೂಕು ಪರಿಷತ್ತು ಬೆಳೆದು ಬಂದ ಹಾದಿಯನ್ನು ವಿವರಿಸಿದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಉಪನ್ಯಾಸಕ ನಯಾಜ್ ಅಹ್ಮದ್, ಕಸಾಪ ತಾಲೂಕು ಅಧ್ಯಕ್ಷ ಬಿ. ಮಂಜುನಾಥ್ ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಎಸ್.ಎಸ್.ಎಲ್.ಸಿ ಯಲ್ಲಿ ಹೆಚ್ಚು ಅಂಕ ಗಳಿಸಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದ ಶ್ರೇಷ್ಠ, ದ್ವಿತೀಯ ಸ್ಥಾನ ಸನ್ನತಿ ಹಾಗೂ ತೃತೀಯ ಸ್ಥಾನ ಪಡೆದ ಪಲ್ಲವಿಯನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ತಾ.ಪಂ. ಇಒ ನಾಗಮಣಿ, ಕನ್ನಡ ಸಾಹಿತ್ಯ ಪರಿಷತ್ತಿನ 7ನೇ ಸಮ್ಮೇಳನಾಧ್ಯಕ್ಷ ಬಿ. ಅಮೀರ್ ಜಾನ್, ನ್ಯೂ ವಿಷನ್ ಶಾಲೆಯ ಮುಖ್ಯಶಿಕ್ಷಕಿ ಡಿ.ಎಲ್. ಪರಿಮಳ, ಕಸಾಪ ಗೌರವ ಕಾರ್ಯದರ್ಶಿ ಶ್ರೀರಾಮಪ್ಪ, ಸಹ ಕಾರ್ಯದರ್ಶಿ ಗುಂಪುಮರದ ಆನಂದ್, ಕಾರ್ಯಕಾರಿ ಸಮಿತಿಯ ಜೀವಿಕ ನಾರಾಯಣಸ್ವಾಮಿ, ಕಡೇಹಳ್ಳಿ ಕದಿರಪ್ಪ, ಆರ್. ರಾಜಪ್ಪ, ಜಿ.ವಿ. ಗಂಗಪ್ಪ, ರಾಮಾಂಜಿನೆಯ್ಯ ಮತ್ತಿತರರು ಭಾಗವಹಿಸಿದ್ದರು.

ಚಿಂತಾಮಣಿಯ ಐಡಿಎಸ್‌ಎಂಟಿ ಸಂಕೀರ್ಣಕ್ಕೆ ಶೀಘ್ರ ಹೈಟೆಕ್ ಸ್ಪರ್ಶ

ನಗರಸಭೆ ಪೌರಾಯುಕ್ತ ಜಿ.ಎನ್. ಚಲಪತಿ ಮಾಹಿತಿ

• **ಕನ್ನಡಪ್ರಭ ವಾರ್ತೆ** ಚಿಂತಾಮಣಿ

ನಗರದ ಸೌಂದರ್ಯೀಕರಣ ಮತ್ತು ವಾಣಿಜ್ಯ ಚಟುವಟಿಕೆಗಳಿಗೆ ವೇಗ ನೀಡುವ ನಿಟ್ಟಿನಲ್ಲಿ ಹೃದಯಭಾಗದಲ್ಲಿರುವ ಐಡಿಎಸ್‌ಎಂಟಿ ಮಳಿಗೆಗಳಿಗೆ ಕಾಯಕಲ್ಪ ನೀಡಲು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಸಿ. ಸುಧಾಕರ್‌ಮಹತ್ವಾಕಾಂಕ್ಷೆಯ ಯೋಜನೆ ರೂಪಿಸಿದ್ದಾರೆ. ಶಿಥಿಲಾವಸ್ಥೆಯ ಹಳೆಯ ಕಟ್ಟಡಗಳ ನೆಲಸಮಗೊಳಿಸಿ ಆ ಜಾಗದಲ್ಲಿ ಅತ್ಯಾಧುನಿಕಮಾದರಿಯವಾಣಿಜ್ಯ ಸಂಕೀರ್ಣ ನಿರ್ಮಿಸಲು ಮಾಸ್ಟರ್ ಪ್ಲಾನ್ ಸಿದ್ಧವಾಗಿದ್ದು, ಶೀಘ್ರವೇ ನಗರದ ಚಿತ್ರಣ ಬದಲಾಗಲಿದೆ ಎಂದು ನಗರಸಭೆ ಪೌರಾಯುಕ್ತ ಜಿ.ಎನ್. ಚಲಪತಿ ತಿಳಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಪೌರಾಯುಕ್ತ ಜಿ.ಎನ್. ಚಲಪತಿ

ನಗರಸಭೆ ಕಚೇರಿಯಲ್ಲಿ ಮಾತನಾಡಿದ ಪೌರಾಯುಕ್ತ ಈ ಹಿಂದೆ ಹಳೆಯ ಮಳಿಗೆಗಳ ಮೇಲೆಯೇ ಬೀದಿಬದಿ ವ್ಯಾಪಾರಿಗಳಿಗಾಗಿ ಹೆಚ್ಚುವರಿ ಅಂಗಡಿಗಳನ್ನು ನಿರ್ಮಿಸುವ ಚಿಂತನೆಯಿತ್ತು. ಆದರೆ ತಾಂತ್ರಿಕ ತಪಾಸಣೆ ವೇಳೆ ಪ್ರಸ್ತುತ ಇರುವ ಕಟ್ಟಡಗಳು ಅತ್ಯಂತ ಶಿಥಿಲಗೊಂಡಿರುವುದು ಕಂಡುಬಂದಿದೆ ಈ ಕಟ್ಟಡಗಳ ಸಂಪೂರ್ಣವಾಗಿ ತೆರವುಗೊಳಿಸಿ ಸುಸಜ್ಜಿತ ಸಂಕೀರ್ಣ ನಿರ್ಮಿಸಲು ನಿರ್ಧರಿಸಲಾಗಿದೆ. ಈ ಸಂಬಂಧ ಶೀಘ್ರದಲ್ಲೇ ಕಾಮಗಾರಿಗೆ ಚಾಲನೆ ನೀಡಲಾಗುವುದೆಂದು ಹೇಳಿದರು.

ತೆರಿಗೆ ಪಾವತಿಗೆ 31ರವರೆಗೆ ಅವಕಾಶ: ತೆರಿಗೆ ಪಾವತಿಯ ಕುರಿತು ಮಾತನಾಡಿದ ಪೌರಾಯುಕ್ತರು, ಸಾರ್ವಜನಿಕರಿಗೆ ಅನುಕೂಲವಾಗುವಂತೆ ಆಸ್ತಿ ತೆರಿಗೆ ಪಾವತಿಯಲ್ಲಿನೀಡಲಾಗುವಶೇ.5 ರಷ್ಟು ರಿಯಾಯಿತಿ ಅವಧಿಯನ್ನು ಜನಗಣತಿಕಾರ್ಯದಹಿನ್ನೆಲೆಯಲ್ಲಿ ಮೇ 31ರವರೆಗೆ ವಿಸ್ತರಿಸಲಾಗಿದೆ. ನಾಗರಿಕರು ಈ ಅವಕಾಶವನ್ನು ಬಳಸಿಕೊಂಡುಕಡ್ಡಾಯವಾಗಿತೆರಿಗೆ ಪಾವತಿಸಬೇಕು. ಅಲ್ಲದೆ ನೀರಿನ ತೆರಿಗೆ ಬಾಕಿ ಇರುವವರು ತಕ್ಷಣವೇ ಪಾವತಿಸಿ ನಗರದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ವಾಣಿಜ್ಯ ಮಳಿಗೆಗಳ ಮಾಲೀಕರು ತೆರಿಗೆ ಪಾವತಿಸುವಲ್ಲಿ ಪಾರದರ್ಶಕತೆಕಾಯ್ದುಕೊಳ್ಳದೆ, ವಾಸ್ತವಕ್ಕಿಂತಕಡಿಮೆತೆರಿಗೆಪಾವತಿಸುತ್ತಿರುವುದು ಗಮನಕ್ಕೆ ಬಂದಿದ್ದು, ಪರಿಶೀಲನೆ ವೇಳೆ ತೆರಿಗೆ ವಂಚನೆ ಪತ್ತೆಯಾದಲ್ಲಿ ದುಪ್ಪಟ್ಟು ದಂಡ ವಿಧಿಸಲಾಗುವುದು.

ಹಾಗೂ ಹೊಸದಾಗಿ ಕಟ್ಟಡಗಳನ್ನು ನಿರ್ಮಿಸುವ ಸಾರ್ವಜನಿಕರಿಗೂ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದ್ದು, ಕಟ್ಟಡ ನಿರ್ಮಾಣದ ಸಮಯದಲ್ಲಿ ರಸ್ತೆ ಸಂಚಾರಕ್ಕೆ ಅಡ್ಡಿಪಡಿಸಬಾರದು ಮತ್ತು ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಜಾಗ್ರತೆ ವಹಿಸಿ, ಹೊಸ ರಸ್ತೆಗಳನ್ನು ಅಗೆದು ರಸ್ತೆಗಳನ್ನು ಹಾಳುಮಾಡಬಾರದೆಂದು ಸೂಚನೆ ನೀಡಿದರು.

ಸಮಸ್ಯೆ ಇರುವ ಕಡೆ ತಕ್ಷಣ ನೀರೊದಗಿಸಿ

ಶಿಡ್ಲಘಟ್ಟ ಟಾಸ್ಕ್‌ಫೋರ್ಸ್ ಸಭೆಯಲ್ಲಿ ಅಧಿಕಾರಿಗಳಿಗೆ ತಹಸೀಲ್ದಾರ್ ತಾಕೀತು

• **ಕನ್ನಡಪ್ರಭ ವಾರ್ತೆ** ಶಿಡ್ಲಘಟ್ಟ

ತಾಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾದ ಗ್ರಾಮಗಳಿಗೆ ತಕ್ಷಣವೇ ನೀರೊದಗಿಸಲು ಕ್ರಮ ಕೈಗೊಳ್ಳಬೇಕೆಂದು ತಹಸೀಲ್ದಾರ್‌ಗಗನಸಿಂಧು ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.



ಟಾಸ್ಕ್ ಫೋರ್ಸ್ ಸಭೆಯಲ್ಲಿ ತಹಸೀಲ್ದಾರ್ ಗಗನಸಿಂಧು ಮಾತನಾಡಿದರು.

ತಾ.ಪಂ. ಆಡಳಿತಾಧಿಕಾರಿ ಅಬಿದ ಸೈಯದ್ ಸಾಹೇಬಜಾನ್ ಅಧ್ಯಕ್ಷತೆಯಲ್ಲಿ ನಡೆದ ಕುಡಿವ ನೀರು, ಜಾನುವಾರುಗಳಿಗೆ ಮೇವು ಸೇರಿ ಇತರೆ ಸಮಸ್ಯೆಗಳ ಕುರಿತ ಟಾಸ್ಕ್ ಫೋರ್ಸ್ ಸಭೆಯಲ್ಲಿ ತಹಶೀಲ್ದಾರ್ ಮಾತನಾಡಿದರು.

ತಾಲೂಕಿನಲ್ಲಿ ಯಾವ ಗ್ರಾಮಗಳಲ್ಲಿ ಈಗಾಗಲೇ ನೀರಿನ ಸಮಸ್ಯೆ ಇದೆ ಅಥವಾ ಮುಂದಿನ ದಿನಗಳಲ್ಲಿ ಸಮಸ್ಯೆ ಉಂಟಾಗಬಹುದು ಎಂಬುದರ ಪಟ್ಟಿ ನೀಡಬೇಕು. ಪ್ರತಿ ಗ್ರಾಮಕ್ಕೆ ಯಾವ ರೀತಿಯ ಕ್ರಮ (ಖಾಸಗಿ ಕೊಳವೆಬಾವಿ, ಟ್ಯಾಂಕರ್, ನೀರಿನ ಕೊಳವೆಬಾವಿ ಫ್ಲಶಿಂಗ್, ಶುದ್ಧೀಕರಣ ಘಟಕಗಳ ದುರಸ್ತಿ) ಅನುಕೂಲ ಎಂಬುದರ ಮಾಹಿತಿ ನೀಡಬೇಕು. ಪ್ರತಿ ಗ್ರಾಮ ಪಂಚಾಯಿತಿಗೆಒಬ್ಬಆಡಳಿತಾಧಿಕಾರಿಗೆ ಹೊಣೆ ನಿಗದಿಪಡಿಸಿ, ಸಮಸ್ಯೆ ಕಂಡು ಬಂದ ಕೂಡಲೇ ಸ್ಥಳದಲ್ಲೇ ಕ್ರಮ ಕೈಗೊಳ್ಳಲು ಸೂಚಿಸಬೇಕು ಎಂದರು ಅವರು ಹೇಳಿದರು.

ತಾಪಂ ಇಒ ಹೇಮಾವತಿ ಮಾತನಾಡಿ, ತಾಲೂಕಿನಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ಕ್ರಮವಹಿಸಿ, ಕೊಳವೆ ಬಾವಿಗಳನ್ನು ಕೊರೆಸಲು ಅವಕಾಶವಿದ್ದರೆ ಆದ್ಯತೆ ಮೇರೆಗೆ ಜಿಲ್ಲಾ ಪಂಚಾಯಿತಿಗೆ ಅನುಮೋದನೆಗೆ ಕಳುಹಿಸಿ, ಯಾವುದೇ ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗದಂತೆ ಗ್ರಾಮ ಪಂಚಾಯಿತಿ ಹಂತದಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವಂತೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ನರೇಗಾ ಸಹಾಯಕ ನಿರ್ದೇಶಕ ಚಂದ್ರಪ್ಪ, ತಾಲೂಕು ಯೋಜನಾಧಿಕಾರಿ ಅನಿಲ್ ಕುಮಾರ್, ತಾಲೂಕು ಮಟ್ಟದ ಅಧಿಕಾರಿಗಳು, ಪಿಡಿಒಗಳು, ಗ್ರಾಮ ಲೆಕ್ಕಾಧಿಕಾರಿಗಳು, ರಾಜಸ್ವನಿರೀಕ್ಷಕರು ಹಾಜರಿದ್ದರು.

ಬೌದ್ಧ ಧರ್ಮದಿಂದ ಶಾಂತಿ, ಅಹಿಂಸೆ ಕರುಣೆ ಸಾಧ್ಯ: ಸೋಸಲೆ ಗಂಗಾಧರ್

ಭೌದ್ಧ ಧರ್ಮದ ವೈಶಿಷ್ಟ್ಯತೆ ಕುರಿತ ವಿಚಾರ ಸಂಕಿರಣ



ಮಾಲೂರಿನ ಊರುಗೋಲು ವೈಚಾರಿಕ ಸಂಘ ಬುದ್ಧ ಬೊಧಿ ಸತ್ವ ಸಂಘವು ಬುದ್ಧ ಪೌರ್ಣಿಮೆ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸೋಸಲೆ ಗಂಗಾಧರ್ ಅವರನ್ನು ಸನ್ಮಾನಿಸಲಾಯಿತು.

• **ಕನ್ನಡಪ್ರಭ ವಾರ್ತೆ** ಮಾಲೂರು

ಬೌದ್ಧ ಧರ್ಮವು ಶಾಂತಿ, ಅಹಿಂಸೆ ಕರುಣೆಯ ಜೊತೆಗೆಸಮಾನತೆಯನ್ನುಸಾರುವಏಕೈಕವೈಜ್ಞಾನಿಕ ಧರ್ಮವಾಗಿದೆ. ಇದು ಪ್ರಾಯೋಗಿಕವಾಗಿ ಯೋಚಿಸು ಕ್ರಿಯಾತ್ಮಕವಾಗಿ ಬೆಳೆ ಎಂಬ ತತ್ವವನ್ನು ಬೋಧಿಸುತ್ತದೆ ಎಂದು ಜೆನ್ ಕವಿ ಹಾಗೂ ಬೌದ್ಧ ತತ್ವ ಮೀಮಾಂಸಕ ಸೋಸಲೆ ಗಂಗಾಧರ್ ಹೇಳಿದರು.

ಅವರುಊರುಗೋಲುವೈಚಾರಿಕಸಂಘ,ಬುದ್ಧ ಬೋಧಿ ಸತ್ವ ಟ್ರಸ್ಟ್ ಹಾಗೂ ಊರುಗೋಲು ಮಹಿಳಾ ವೈಚಾರಿಕ ಸಂಘದ ಸಹಯೋಗದಲ್ಲಿ ಸ್ಥಳೀಯ ಬುದ್ಧವಿಹಾರದಲ್ಲಿ ಬುದ್ಧ ಪೂರ್ಣಿಮೆ ಅಂಗವಾಗಿ ಹಮ್ಮಿಕೊಂಡಿದ್ದ ಬೌದ್ಧ ಧರ್ಮದ ವೈಶಿಷ್ಟತೆಎಂಬವಿಚಾರಸಂಕಿರಣಕಾರ್ಯಕ್ರಮದಲ್ಲಿ ಮಾತನಾಡುತ್ತವಿಶ್ವದಹತ್ತುಪ್ರಮುಖಧರ್ಮಗಳಲ್ಲಿ ನಾಲ್ಕನೇಅತಿದೊಡ್ಡಧರ್ಮಬೌದ್ಧಧರ್ಮವಾಗಿದ್ದು, ವಿಶ್ವ ಮಾನವತಾ ವಾದವನ್ನು ಬೋಧಿಸುತ್ತದೆ ಎಂದರು.

ಬುದ್ಧಬೋಧಿಸತ್ವಟ್ರಸ್ಟ್ಅಧ್ಯಕ್ಷಡಾ.ಜಿ. ಹನುಮಪ್ಪ ಅವರು ಊರುಗೋಲು ವೈಚಾರಿಕ ಸಂಘದ ವತಿಯಿಂದ ಪ್ರತಿವರ್ಷ ನಿರಂತರವಾಗಿ ಬುದ್ಧ ಪೂರ್ಣಿಮೆಯನ್ನು ಆಚರಿಸಲಾಗುತ್ತಿದೆ. ಮೌಢ್ಯವನ್ನು ವಿರೋಧಿಸಿ ವೈಚಾರಿಕತೆಯನ್ನು ಮೇಳೈಸುವ ಬೌದ್ಧ ಧರ್ಮ ವಿಶ್ವಮಾನವತೆಯನ್ನು ಪ್ರೇಮಿಸುವ ಪ್ರತಿಯೊಬ್ಬರ ಅಭಿಮಾನದ ಧರ್ಮವಾಗಿದೆ ಎಂದರು.

ಇದೇಸಂದರ್ಭದಲ್ಲಿಸಂಪನ್ಮೂಲವ್ಯಕ್ತಿಸೋಸಲೆ ಗಂಗಾಧರ್ ಅವರನ್ನು ಸನ್ಮಾನಿಸಲಾಯಿತು. ಈ ಕಾರ್ಯಕ್ರಮ ಅಂಗವಾಗಿ ಪಟ್ಟಣದ ಪ್ರಮುಖ ಬೀದಿಯಲ್ಲಿ ದೀಪದೊಂದಿಗೆ ಮೆರವಣಿಗೆ ನಡೆಸಲಾಯಿತು. ಊರುಗೋಲು ವೈಚಾರಿಕ ಸಂಘದಅಧ್ಯಕ್ಷದೊಡ್ಡಮಲ್ಲೆನಾರಾಯಣಸ್ವಾಮಿ, ಕಾರ್ಯದರ್ಶಿಪುರನಾರಾಯಣಸ್ವಾಮಿ, ಮಹಿಳಾ ಘಟಕದ ಅಧ್ಯಕ್ಷೆ ಎ. ಮಂಜುಳಾ, ಡಿಡಿಪಿಯು ರಾಮಚಂದ್ರಪ್ಪ,ಎಂ.ಹೊಸಹಳ್ಳಿನಾರಾಯಣಸ್ವಾಮಿ ,ವೈ. ಮೀನಾಕ್ಷಿ, ಶೇಷಪ್ಪ, ದೊಡ್ಡಿಮುನಿಯಪ್ಪ, ಕೆ. ಮುನಿಕೃಷ್ಣಪ್ಪ, ಗಿರಿಯಪ್ಪ, ಟಿ.ಎಂ. ವೆಂಕಟೇಶ್, ಹೆಚ್.ಎಂ.ಶ್ರೀನಿವಾಸ್,ಎಲ್,ನಾರಾಯಣಸ್ವಾಮಿ, ಟಿ.ಕೆ. ಶ್ರೀನಿವಾಸ್, ನಂಜುಂಡಪ್ಪ ಪಾಸ್ವಾನ್, ಅಶೋಕ್, ಅಂಬರೀಶ್ ಇನ್ನಿತರರು ಇದ್ದರು.

ಅನಗತ್ಯವಾಗಿ ನೀರು ಪೋಲು ಮಾಡದಿರಿ: ಜನಕ್ಕೆ ಪಿಡಿಒ ಮನವಿ

ಬಂಗಾರಪೇಟೆ: ಬೇಸಿಗೆಯಲ್ಲಿಗ್ರಾಮಗಳಲ್ಲಿನೀರಿನಬಳಕೆಬಗ್ಗೆಗ್ರಾಮಸ್ಥರಿಗೆ ಅರಿವು ಮೂಡಿಸಲು ನೀರಿನ ಅದಾಲತ್ ಸಹಕಾರಿಯಾಗಿದೆಎಂದು ಪಿಡಿಒ ವಾಣಿಶ್ರೀ ಹೇಳಿದರು.

ತಾಲೂಕಿನ ತೊಪ್ಪನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯದ ಸಭಾಂಗಣದಲ್ಲಿಸಾರ್ವಜನಿಕರಕುಡಿಯುವ ನೀರಿನ ಸಮಸ್ಯೆಗಳನ್ನು ಆಲಿಸಲು ಮತ್ತು ಪರಿಹರಿಸಲು ಹಮ್ಮಿಕೊಂಡಿದ್ದ ನೀರಿನಅದಾಲತ್‌ಕಾರ್ಯಕ್ರಮದಲ್ಲಿ ಮಾತನಾಡಿದರು.

ಬೇಸಿಗೆಯ ಹಿನ್ನೆಲೆಯಲ್ಲಿ ಗ್ರಾಮಗಳಲ್ಲಿಉದ್ಭವಿಸಿರುವನೀರಿನಅಭಾವ ಹಾಗೂ ಪೂರೈಕೆಯಲ್ಲಿನ ತಾಂತ್ರಿಕ ಸಮಸ್ಯೆಗಳನ್ನುಸರಿಪಡಿಸುವನಿಟ್ಟಿನಲ್ಲಿ ಈ ಅದಾಲತ್ ಮಹತ್ವದ ಪಾತ್ರ ವಹಿಸುತ್ತದೆ. ಜನರೂ ಬೇಸಿಗೆ ಮುಗಿವವರೆಗೂ ಅನಗತ್ಯ ನೀರನ್ನು ಪೋಲು ಮಾಡದೆ ರಕ್ಷಿಸ ಬೇಕೆಂದರು.

ಗ್ರಾಮಗಳಲ್ಲಿ ಜಾನುವಾರುಗಳ ನೀರಿನತೊಟ್ಟಿಗಳಿಗೆಪ್ರತಿದಿನಸಕಾಲಕ್ಕೆ ನೀರು ತುಂಬಿಸುವಂತೆ ಸೂಚಿಸಿದ್ದು, ಗ್ರಾಮೀಣ ಭಾಗದ ಕೆರೆಗಳು ಮತ್ತು ಹಳ್ಳ-ಕೊಳ್ಳಗಳುಬತ್ತುತ್ತಿರುವುದರಿಂದ ಜಾನುವಾರುಗಳು ಕುಡಿಯುವ ನೀರಿಗಾಗಿ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಪಂಚಾಯಿತಿ ಆಡಳಿತ, ಹೈನುಗಾರರ ಹಿತದೃಷ್ಟಿಯಿಂದ ಈ ಕ್ರಮಕ್ಕೆ ಮುಂದಾಗಿದೆ ಎಂದರು. ಎಂಜಿನಿಯರ್ ಮಂಜುನಾಥ, ಕಾರ್ಯದರ್ಶಿ ರಾಮಭದ್ರಪ್ಪ, ಡಿಇಒ ಮುರಳಿ ಇದ್ದರು.

